

# ಟಾಟಾ ನೀತಿ ಸಂಹಿತೆ

**2015**

# ಸ್ಫೂರ್ತಿ ನೀಡುವ ನಾಯಕತ್ವ

100 ಕ್ಕೂ ಹೆಚ್ಚು ವರ್ಷಗಳಿಂದ, ಟಾಟಾ ಗ್ರೂಪ್ ಸಂಸ್ಥಾಪಕರಾದ ಜೆಮ್‌ಶೆಡ್‌ಜೀ ಟಾಟಾರವರ

ದೃಷ್ಟಿಕೋನಕ್ಕೆ ಸೂಕ್ತವಾಗಿರುವ ದೂರದೃಷ್ಟಿಶಾಲಿಗಳಿಂದ ಮುನ್ನಡೆಸಲ್ಪಟ್ಟಿದೆ

ಉದ್ದಿಮೆಯ ಬೆಳವಣಿಗೆಯೊಂದಿಗೆ ಸಮಾಜವನ್ನು ಉತ್ತಮವಾಗಿಸುವ ದೃಷ್ಟಿಕೋನ

ಜವಾಬ್ದಾರಿಯುತ ಉದ್ದಿಮೆ ನಡೆಸುತ್ತಿದ್ದ ವಿಧಾನವನ್ನು ಬದಲಾಯಿಸುವ ಮುಂಚೂಣಿ

ಸಾಮಾಜಿಕ ಅಭಿಯಾನಗಳನ್ನು ಕಾರ್ಯರೂಪಕ್ಕೆ ತರಲಾಗಿದೆ

ಸದೃಢವಾದ ಸಾಮಾಜಿಕ ಅಂತಃಪ್ರಜ್ಞೆಯ ಸಮೂಹದೊಳಗೆ ತರಲಾದ ದೃಷ್ಟಿಕೋನ.



ನಾವು ಇತರ ಜನರಿಗಿಂತ ಹೆಚ್ಚು ನಿಸ್ವಾರ್ಥ, ಉದಾರ ಅಥವಾ ಪರೋಪಕಾರಿ ಎಂದು ಹೇಳಿಕೊಳ್ಳುವುದಿಲ್ಲ. ಆದರೆ ನಮ್ಮ ಷೇರುದಾರರ ಹಿತಾಸಕ್ತಿ ಮತ್ತು ಉದ್ಯೋಗಿಗಳ ಆರೋಗ್ಯ ಹಾಗೂ ಸುಸ್ಥಿರತೆ. ನಮ್ಮ ಯಶಸ್ಸಿನ ಅಡಿಪಾಯವನ್ನು ಪರಿಗಣಿಸಿ ನಾವು ಉತ್ತಮವಾದ ಹಾಗೂ ನೇರವಾದ ವ್ಯವಹಾರ ತತ್ವಗಳ ಆಧಾರದ ಮೇಲೆ ಪ್ರಾರಂಭಿಸಿದ್ದೇವೆ ಎಂದು ಭಾವಿಸುತ್ತೇವೆ.

**ಜೆಮ್‌ಶೆಡ್‌ಜೀ ಟಾಟಾ**

ಟಾಟಾ ಗ್ರೂಪ್‌ನ ಸಂಸ್ಥಾಪಕರು
ಅಧ್ಯಕ್ಷರು (1868-1904)

# ವಿಷಯಗಳು


ಮುನ್ನುಡಿ ......... 3

ಎ. ನಮ್ಮ ಮೌಲ್ಯಗಳು ......... 4

ಬಿ. ಈ ಸಂಹಿತೆಯ ವ್ಯಾಪ್ತಿ ಮತ್ತು ಉದ್ದೇಶ ......... 5

ಸಿ. ನಮ್ಮ ಪ್ರಮುಖ ತತ್ವಗಳು ......... 7

ಡಿ. ನಮ್ಮ ಉದ್ಯೋಗಿಗಳು ......... 9

ಇ. ನಮ್ಮ ಗ್ರಾಹಕರು ......... 18

ಎಫ್. ನಮ್ಮ ಸಮುದಾಯಗಳು ಹಾಗೂ ಪರಿಸರ ......... 21

ಜಿ. ನಮ್ಮ ಮೌಲ್ಯ ಸರಣಿಯ ಪಾಲುದಾರರು ......... 23

ಹೆಚ್. ನಮ್ಮ ಹಣಕಾಸಿನ ಷೇರುದಾರರು ......... 25

ಐ. ಸರ್ಕಾರಗಳು ......... 27

ಜೆ. ನಮ್ಮ ಸಮೂಹ ಕಂಪನಿಗಳು ......... 29

**ಹೆಚ್ಚುತ್ತಿರುವ ಕಾಳಜಿಗಳು** ......... 30

**ಹೊಣೆಗಾರಿಕೆ** ......... 31

**ಸ್ವೀಕೃತಿ ಹಾಳೆ** ......... 33

# ಮುನ್ನುಡಿ

ಟಾಟಾ ಕಂಪನಿಗಳು 150 ವರ್ಷಗಳಿಂದ ಸಂಸ್ಥಾಪಕರು ನೀಡಿರುವ ಮೌಲ್ಯಗಳು ಮತ್ತು ಆದರ್ಶಗಳಿಗೆ ಸ್ಥಿರವಾಗಿ ಬದ್ಧವಾಗಿವೆ. ಟಾಟಾ ನೀತಿ ಸಂಹಿತೆಯನ್ನು ಮೊದಲು ಶ್ರೀ ರತನ್ ಟಾಟಾರವರು ಅಧಿಕೃತಗೊಳಿಸಿದರು. ಇದು ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ನಮ್ಮ ಕಂಪನಿಗಳು ಮತ್ತು ಸಹೋದ್ಯೋಗಿಗಳ ನಡವಳಿಕೆಯನ್ನು ಮಾರ್ಗದರ್ಶಿಸುವ ಮತ್ತು ನಿಯಂತ್ರಿಸುವ ಗುಂಪಿನ ಮೌಲ್ಯಗಳು ಮತ್ತು ಆದರ್ಶಗಳನ್ನು ಸೂಚಿಸುತ್ತದೆ. ಇಂದು, ಈ ಸಂಹಿತೆ ನಮ್ಮ ವೈಯಕ್ತಿಕ ಮತ್ತು ಪ್ರಮುಖ ಟಾಟಾ ಮೌಲ್ಯಗಳಿಗೆ ನಾಯಕತ್ವದ ಬದ್ಧತೆಗಳನ್ನು ಆಧರಿಸಿದ ತಳಹದಿಯಾಗಿದೆ.

ಟಾಟಾ ನೀತಿ ಸಂಹಿತೆಯು ನಾವು ಕಾರ್ಯನಿರ್ವಹಿಸುವ ಸಮುದಾಯಗಳೂ ಸೇರಿದಂತೆ ನಮ್ಮ ಪ್ರತೀ ಪಾಲುದಾರರಿಗೆ ಬದ್ಧತೆಯನ್ನು ತಿಳಿಸುತ್ತದೆ ಮತ್ತು ನಾವು ಕೆಲವೊಮ್ಮೆ ವ್ಯಾಪಾರದಲ್ಲಿ ಸಂದಿಗ್ಧತೆಗಳನ್ನು ಎದುರಿಸಿದಾಗ ನಮಗೆ ಮಾರ್ಗದರ್ಶನ ನೀಡುವ ಬೆಳಕಾಗಿದ್ದು, ಅದು ನಮ್ಮನ್ನು ನೈತಿಕ ಹಾದಿಯಲ್ಲಿ ಕರೆದೊಯ್ಯುತ್ತದೆ. ಕಾನೂನು ಮತ್ತು ನಿಬಂಧನೆಗಳಲ್ಲಿನ ಬದಲಾವಣೆಗಳಿಗೆ ಸಮಕಾಲೀನ ಮತ್ತು ಸಾಂದರ್ಭಿಕವಾಗಿ ಉಳಿಯಲು ಆಗಾಗ್ಗೆ ಮಾರ್ಪಡಿಸುವ ಸಂಹಿತೆ ಕ್ರಿಯಾತ್ಮಕವಾಗಿದೆ. ಆದರೂ, ಅದರ ಮೂಲದಲ್ಲಿ ಅದು ಬದಲಾಗದೇ ಉಳಿದಿದೆ.

ನಮ್ಮ ಎಲ್ಲಾ ಉದ್ಯೋಗಿಗಳು, ನಿರ್ದೇಶಕರು ಮತ್ತು ಪಾಲುದಾರರು ಈ ಸಂಹಿತೆಯಲ್ಲಿ ನೀಡಲಾದ ಪ್ರಮುಖ ಮೌಲ್ಯಗಳು ಮತ್ತು ತತ್ವಗಳಿಗೆ ಪ್ರಬಲವಾದ ಬದ್ಧತೆ ಮತ್ತು ಅನುಸರಣೆಯಿಂದ ವ್ಯಾಪಾರ ಘಟಕವಾಗಿ ನಮ್ಮ ಯಶಸ್ಸನ್ನು ವಿವರಿಸುತ್ತದೆ. ಪ್ರತಿಯೊಬ್ಬ ಟಾಟಾ ಸಹೋದ್ಯೋಗಿ ಮತ್ತು ಟಾಟಾ ಕಂಪನಿಯು ಪ್ರಪಂಚದಾದ್ಯಂತ ನಮ್ಮ ವ್ಯಾಪಾರ ಹಿತಾಸಕ್ತಿಗಳನ್ನು ನಿಯಂತ್ರಿಸುವ ಕಾನೂನು ಮತ್ತು ನಿಬಂಧನೆಗಳನ್ನು ಅನುಸರಿಸುವುದನ್ನು ಮುಂದುವರೆಸುತ್ತದೆ ಎಂದು ನಾನು ನಂಬುತ್ತೇನೆ, ಆದರೆ ಇತರರಿಂದ ಗೌರವವನ್ನು ಉಂಟುಮಾಡುವ ಮತ್ತು ಅನುಕರಣೆಯನ್ನು ಪ್ರಚೋದಿಸುವ ನೈತಿಕ ನಡವಳಿಕೆಯ ಹೊಸ ಮಾನದಂಡಗಳನ್ನು ಹೊಂದಿಸುವುದನ್ನು ಮುಂದುವರೆಸುತ್ತದೆ.

**ಎನ್. ಚಂದ್ರಶೇಖರನ್**
21 ನೇ ಫೆಬ್ರವರಿ 2017



# ಎ. ನಮ್ಮ ಮೌಲ್ಯಗಳು

ಟಾಟಾ ಯಾವಾಗಲೂ ಮೌಲ್ಯಚಾಲಿತವಾಗಿದೆ. ನಾವು ನಮ್ಮ ಉದ್ದಿಮೆ ಚಟುವಟಿಕೆಗಳನ್ನು ನಡೆಸುವ ವಿಧಾನದಲ್ಲಿ ಐದು ಪ್ರಮುಖ ಮೌಲ್ಯಗಳಿವೆ.



## ಸಮಗ್ರತೆ

ನಾವು ನಮ್ಮ ಸಂಹಿತೆಯಲ್ಲಿ ನಿಷ್ಕಳಂಕ, ಪ್ರಾಮಾಣಿಕ, ಪಾರದರ್ಶಕ ಮತ್ತು ನೈತಿಕವಾಗಿರಬೇಕು; ನಾವು ಮಾಡುವ ಪ್ರತಿಯೊಂದೂ ಸಾರ್ವಜನಿಕ ಪರಿಶೀಲನೆಯ ಪರೀಕ್ಷೆಗೆ ಒಳಪಡಬೇಕು.

## ಒಗ್ಗಟ್ಟು

ನಾವು ನಮ್ಮ ಜನರು ಮತ್ತು ಪಾಲುದಾರರಲ್ಲಿ ಹೂಡಿಕೆ ಮಾಡುತ್ತೇವೆ. ನಿರಂತರ ಕಲಿಕೆಯನ್ನು ಸಕ್ರಿಯಗೊಳಿಸುತ್ತೇವೆ ಹಾಗೂ ನಂಬಿಕೆ ಮತ್ತು ಪರಸ್ಪರ ಗೌರವದ ಆಧಾರದ ಮೇಲೆ ಕಾಳಜಿ ಮತ್ತು ಸಂಯೋಜಿತ ಸಂಬಂಧಗಳನ್ನು ನಿರ್ಮಿಸುತ್ತೇವೆ.

## ಜವಾಬ್ದಾರಿ

ನಾವು ನಮ್ಮ ಉದ್ದಿಮೆಗಳಲ್ಲಿ ಪರಿಸರ ಮತ್ತು ಸಾಮಾಜಿಕ ತತ್ವಗಳನ್ನು ಸಮಗ್ರಗೊಳಿಸುತ್ತೇವೆ. ಈ ಮೂಲಕ ಜನರಿಂದ ಬಂದಿರುವುದು ಅನೇಕ ಬಾರಿ ಜನರಿಗೆ ಮರಳುತ್ತದೆ.

## ಮುಂದಾಳತ್ವ

ಹೊಸ ಪರಿಹಾರಗಳನ್ನು ಅಭಿವೃದ್ಧಿಪಡಿಸಲು ಗ್ರಾಹಕರ ಒಳನೋಟವನ್ನು ಬಳಸಿ ನಾವು ಧೈರ್ಯದಿಂದ ಮತ್ತು ಆತ್ಮವಿಶ್ವಾಸದಿಂದ ಸವಾಲುಗಳನ್ನು ಎದುರಿಸುತ್ತೇವೆ.

## ಅತ್ಯುತ್ತಮತೆ

ನಾವು ಅತ್ಯುತ್ತಮ ಮಾನದಂಡದ ಗುಣಮಟ್ಟವನ್ನು ಸಾಧಿಸಲು ಉತ್ಸುಕರಾಗಿದ್ದು, ಯಾವಾಗಲೂ ಅರ್ಹತೆಯನ್ನು ಪ್ರೋತ್ಸಾಹಿಸುತ್ತೇವೆ.

ಈ ಸಾರ್ವತ್ರಿಕ ಮೌಲ್ಯಗಳು ಟಾಟಾ ನೀತಿ ಸಂಹಿತೆಗೆ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತವೆ. ಪ್ರತೀ ಟಾಟಾ ಕಂಪನಿಯ ಮೌಲ್ಯ ವ್ಯವಸ್ಥೆಯೊಳಗೆ ಅಭಿವ್ಯಕ್ತಿಯನ್ನು ಕಾಣಬಹುದು.

## ಬಿ. ಈ ಸಂಹಿತೆಯ ವ್ಯಾಪ್ತಿ ಮತ್ತು ಉದ್ದೇಶ

1. ಈ ಸಂಹಿತೆ ನಾವು ಈ ಕೆಳಗಿನವರೊಂದಿಗೆ ಹೇಗೆ ವರ್ತಿಸಬೇಕು ಎನ್ನುವುದನ್ನು ತಿಳಿಸುತ್ತದೆ:
   - ನಮ್ಮ ಉದ್ಯೋಗಿಗಳು, ಅಥವಾ ನಮ್ಮೊಂದಿಗೆ ಕೆಲಸ ಮಾಡುವವರು;
   - ನಮ್ಮ ಗ್ರಾಹಕರು
   - ನಾವು ಕಾರ್ಯ ನಿರ್ವಹಿಸುವ ಸಮುದಾಯಗಳು ಮತ್ತು ಪರಿಸರ
   - ನಮ್ಮ ಮೌಲ್ಯ ಸರಣಿಯ ಪಾಲುದಾರರು. ಇದು ಪೂರೈಕೆದಾರರು ಹಾಗೂ ಸೇವಾದಾರರು, ವಿತರಕರು, ಮಾರಾಟ ಪ್ರತಿನಿಧಿಗಳು, ಗುತ್ತಿಗೆದಾರರು, ವಾಹಿನಿ ಪಾಲುದಾರರು, ಸಮಾಲೋಚಕರು, ಮಧ್ಯವರ್ತಿಗಳು ಮತ್ತು ಏಜೆಂಟರನ್ನು ಒಳಗೊಂಡಿದೆ.
   - ನಮ್ಮ ಜಂಟಿ ಸಂಸ್ಥೆಯ ಪಾಲುದಾರರು ಅಥವಾ ಇತರ ಉದ್ದಿಮೆ ಅಸೋಸಿಯೇಟ್‌ಗಳು;
   - ನಮ್ಮ ಹಣಕಾಸಿನ ಷೇರುದಾರರು
   - ನಾವು ಕೆಲಸ ಮಾಡುವ ದೇಶದಲ್ಲಿನ ಸರ್ಕಾರಗಳು; ಮತ್ತು
   - ನಮ್ಮ ಸಮೂಹ ಕಂಪನಿಗಳು
2. ಈ ಸಂಹಿತೆಯಲ್ಲಿ, "ನಾವು" ಅಥವಾ "ನಮ್ಮ" ಎಂದರೆ ಸನ್ನಿವೇಶಕ್ಕೆ ಅನುಗುಣವಾಗಿ ನಮ್ಮ ಕಂಪನಿ, ನಮ್ಮ ಕಾರ್ಯನಿರ್ವಾಹಕ ನಿರ್ದೇಶಕರು, ಅಧಿಕಾರಿಗಳು, ಉದ್ಯೋಗಿಗಳು ಮತ್ತು ನಮ್ಮೊಂದಿಗೆ ಕೆಲಸ ಮಾಡುವವರು.
3. ಈ ಸಂಹಿತೆಯಲ್ಲಿರುವ "ನಮ್ಮ ಸಮೂಹ ಕಂಪನಿಗಳು" ಎನ್ನುವ ಪದ ಸಾಮಾನ್ಯವಾಗಿ ಟಾಟಾ ಸನ್ಸ್ ಈ ಸಂಹಿತೆಯನ್ನು ಅನ್ವಯಿಸಲು ಉದ್ದೇಶಿಸಿರುವ ಕಂಪನಿಗಳು ಮತ್ತು/ಅಥವಾ ಟಾಟಾ ಸನ್ಸ್ ಈ ಸಂಹಿತೆಯನ್ನು ಬಿಡುಗಡೆ ಮಾಡಬೇಕೆಂದು ಬಯಸಿರುವ ಸಂಸ್ಥೆಯಾಗಿದೆ.
4. ಈ ಸಂಹಿತೆ ನಮ್ಮೊಂದಿಗೆ ಕೆಲಸ ಮಾಡುವ ಎಲ್ಲರ ನಿರೀಕ್ಷೆಗಳನ್ನು ಹೊಂದಿಸುತ್ತದೆ. ನಮ್ಮೊಂದಿಗೆ ವ್ಯವಹರಿಸುವವರು ನಾವು ಮಾಡುವ ಪ್ರತಿಯೊಂದಕ್ಕೂ ಸಂಹಿತೆ ಆಧಾರವಾಗಿದೆ ಎಂದು ನಿರೀಕ್ಷಿಸುತ್ತೇವೆ ಹಾಗೂ ನಮ್ಮೊಂದಿಗೆ ಕೆಲಸ ಮಾಡಲು ಅದಕ್ಕನುಗುಣವಾಗಿ

### ನೆನಪಿಡಿ...

ಈ ಸಂಹಿತೆಯಲ್ಲಿ ನೀಡಲಾಗಿರುವ ಮೌಲ್ಯಗಳು ಮತ್ತು ತತ್ವಗಳನ್ನು ಅನುಸರಿಸುವ ಮೂಲಕ ನಮ್ಮ ಖ್ಯಾತಿ ಮತ್ತು ಬ್ರಾಂಡ್ ಈಕ್ವಿಟಿಯನ್ನು ರಕ್ಷಿಸುವುದು ನಮ್ಮ ಬದ್ಧತೆಯಾಗಿದೆ. ಹೀಗೆ ಮಾಡುವುದರಿಂದ ನಮ್ಮ ವಿಶಿಷ್ಟ ಸಂಸ್ಕೃತಿ ಮತ್ತು ಗುರುತನ್ನು ನಾವು ಬಲಪಡಿಸುತ್ತೇವೆ.

# ನಮ್ಮ ಪ್ರಮುಖ ತತ್ವಗಳು



ಟಾಟಾ ನಿರ್ವಹಣಾ ತತ್ವ ಯಾವಾಗಲೂ ಹಾಗೂ ಇಂದು ಕಾರ್ಪೊರೇಟ್ ಉದ್ಯಮವನ್ನು ಮಾಲೀಕರ ಹಿತಾಸಕ್ತಿಯಿಂದ ಮಾತ್ರವಲ್ಲದೇ, ಉದ್ಯೋಗಿಗಳು, ಅವರ ಉತ್ಪನ್ನಗಳ ಗ್ರಾಹಕರು, ಸ್ಥಳೀಯ ಸಮುದಾಯದ ಹಿತಾಸಕ್ತಿಯಲ್ಲಿ ಸಮನಾಗಿ ನಿರ್ವಹಿಸಬೇಕು.

**ಜೆ.ಆರ್.ಡಿ ಟಾಟಾ**

ಅಧ್ಯಕ್ಷರು, ಟಾಟಾ ಸನ್ಸ್ (1938–1991)

## ಸಿ. ನಮ್ಮ ಪ್ರಮುಖ ತತ್ವಗಳು

1. ಅತ್ಯುನ್ನತ ನೈತಿಕ ಮತ್ತು ಮಾನಸಿಕ ಮಾನದಂಡಗಳಿಗೆ ಅನುಗುಣವಾಗಿ ನಮ್ಮ ವ್ಯವಹಾರಗಳನ್ನು ನಿರ್ವಹಿಸಲು ನಾವು ಬದ್ಧರಾಗಿದ್ದೇವೆ. ಯಾವುದೇ ರೂಪದಲ್ಲಿ ಲಂಚ ಅಥವಾ ಭ್ರಷ್ಟಾಚಾರವನ್ನು ನಾವು ಸಹಿಸುವುದಿಲ್ಲ. ಈ ಬದ್ಧತೆಯು ನಾವು ಮಾಡುವ ಪ್ರತಿಯೊಂದಕ್ಕೂ ಆಧಾರವಾಗಿದೆ.

2. ನಾವು ಉತ್ತಮ ಕಾರ್ಪೋರೇಟ್ ಪೌರತ್ವಕ್ಕೆ ಬದ್ಧರಾಗಿದ್ದೇವೆ. ನಮ್ಮ ವ್ಯಾಪಾರ ಯೋಜನೆಯ ಅವಿಭಾಜ್ಯ ಅಂಗವಾಗಿ ನಾವು ಕಾರ್ಯನಿರ್ವಹಿಸುವ ಸಮುದಾಯಗಳಿಗೆ ಪ್ರಯೋಜನವನ್ನು ನೀಡುವ ಸಾಮಾಜಿಕ ಅಭಿವೃದ್ಧಿ ಚಟುವಟಿಕೆಗಳನ್ನು ನಾವು ಪರಿಗಣಿಸುತ್ತೇವೆ.

3. ನಾವು ಕಾರ್ಯನಿರ್ವಹಿಸುತ್ತಿರುವ ದೇಶಗಳು ಮತ್ತು ಪ್ರದೇಶಗಳ ಸಮುದಾಯಗಳ ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡಲು ನಾವು ಬಯಸುತ್ತೇವೆ, ಆದರೆ ಅವರ ಸಂಸ್ಕೃತಿ, ರೂಢಿಗಳು ಮತ್ತು ಪರಂಪರೆಯನ್ನು ಗೌರವಿಸುತ್ತೇವೆ. ನಾವು ಕಾರ್ಯನಿರ್ವಹಿಸುವ ಸಮುದಾಯಗಳ ವ್ಯಾಪಕ ಹಿತಾಸಕ್ತಿಗೆ ಹಾನಿಕಾರಕವಾದ ಯಾವುದೇ ಯೋಜನೆ ಅಥವಾ ಚಟುವಟಿಕೆಯನ್ನು ತಪ್ಪಿಸಲು ನಾವು ಪ್ರಯತ್ನಿಸುತ್ತೇವೆ.

4. ವಾಣಿಜ್ಯ ಲಾಭದ ಅನ್ವೇಷಣೆಗಾಗಿ ನಾವು ಸುರಕ್ಷತೆಯನ್ನು ರಾಜಿ ಮಾಡಿಕೊಳ್ಳುವುದಿಲ್ಲ. ನಮ್ಮ ಉದ್ಯೋಗಿಗಳಿಗೆ ಮತ್ತು ನಮ್ಮೊಂದಿಗೆ ಕೆಲಸ ಮಾಡುವ ಎಲ್ಲರಿಗೂ ಸುರಕ್ಷಿತ, ಆರೋಗ್ಯಕರ ಮತ್ತು ಸ್ವಚ್ಛವಾದ ಕೆಲಸದ ವಾತಾವರಣವನ್ನು ನೀಡಲು ನಾವು ಪ್ರಯತ್ನಿಸುತ್ತೇವೆ.

5. ನಮ್ಮ ಕಂಪನಿಯನ್ನು ಪ್ರತಿನಿಧಿಸುವಾಗ, ನಾವು ವೃತ್ತಿಪರತೆ, ಪ್ರಾಮಾಣಿಕತೆ ಮತ್ತು ಸಮಗ್ರತೆಯೊಂದಿಗೆ ಕೆಲಸ ಮಾಡುತ್ತೇವೆ ಹಾಗೂ ಅತ್ಯುನ್ನತ ನೈತಿಕ ಹಾಗೂ ಮಾನಸಿಕ ಮಾನದಂಡಗಳಿಗೆ ಅನುಗುಣವಾಗಿರುತ್ತೇವೆ. ನಾವು ಕಾರ್ಯನಿರ್ವಹಿಸುವ ದೇಶಗಳಲ್ಲಿ, ಅಲ್ಲಿನ ಸಂಸ್ಕೃತಿಗೆ ಅನುಗುಣವಾದ ನಡವಳಿಕೆಯನ್ನು ಪ್ರದರ್ಶಿಸುತ್ತೇವೆ. ನಮ್ಮ ನಡವಳಿಕೆಯು ನ್ಯಾಯೋಚಿತ ಮತ್ತು ಪಾರದರ್ಶಕವಾಗಿರಬೇಕು ಹಾಗೂ ಮೂರನೆಯ ವ್ಯಕ್ತಿಗಳಿಂದಲೂ ನ್ಯಾಯೋಚಿತ ಹಾಗೂ ಪ್ರಾಮಾಣಿಕವಾಗಿರಬೇಕು.

6. ನಮ್ಮ ಎಲ್ಲಾ ಪಾಲುದಾರರ ಮಾನವ ಹಕ್ಕುಗಳು ಮತ್ತು ಘನತೆಯನ್ನು ನಾವು ಗೌರವಿಸುತ್ತೇವೆ.

7. ನಮ್ಮ ಮಧ್ಯವರ್ತಿಗಳ ಹಿತಾಸಕ್ತಿಯನ್ನು ಸಮತೋಲನಗೊಳಿಸಲು ನಾವು ಪ್ರಯತ್ನಿಸುತ್ತೇವೆ, ಪ್ರತಿಯೊಬ್ಬರನ್ನೂ ನ್ಯಾಯಯುತವಾಗಿ ಪರಿಗಣಿಸುತ್ತೇವೆ ಹಾಗೂ ಯಾವುದೇ ರೀತಿಯ ತಾರತಮ್ಯವಾಗದಂತೆ ತಡೆಯುತ್ತೇವೆ.

8. ನಮ್ಮ ಮಧ್ಯವರ್ತಿಗಳಿಗೆ ನಾವು ನೀಡುವ ವಿವರಣೆಗಳು ನಿಜವಾಗಿರಬೇಕು ಹಾಗೂ ಉತ್ತಮ ಆಶಯದಿಂದ ಕೂಡಿರಬೇಕು.

9. ನಾವು ಯಾವುದೇ ನಿರ್ಬಂಧಿತ ಅಥವಾ ಅಪ್ರಾಮಾಣಿಕ ವ್ಯಾಪಾರ ಅಭ್ಯಾಸಗಳಲ್ಲಿ ತೊಡಗಬಾರದು.

10. ನಮ್ಮ ಮಧ್ಯವರ್ತಿಗಳಿಗೆ ಉತ್ತಮ ನಂಬಿಕೆಯಿಂದ ಸಂದೇಹ ಅಥವಾ ಪ್ರಶ್ನೆಗಳನ್ನು ಕೇಳಲು ಅಥವಾ ನಮ್ಮ ಸಂಹಿತೆಯ ನಿಜವಾದ ಅಥವಾ ಗ್ರಹಿಸಿದ ಉಲ್ಲಂಘನೆಗಳ ನಿದರ್ಶನಗಳನ್ನು ವರದಿ ಮಾಡಲು ನಾವು ಅವಕಾಶ ನೀಡುತ್ತೇವೆ.

11. ಉಂಟಾಗಿರುವ ಅಥವಾ ಉತ್ತಮ ನಂಬಿಕೆಯಿಂದ ವರದಿಯಾದ ಪ್ರಕರಣಗಳನ್ನು ಎದುರಿಸಲು ಪ್ರತೀಕಾರದ ಭಯದಿಂದ ಮುಕ್ತವಾದ ವಾತಾವರಣ ನಿರ್ಮಿಸಲು ನಾವು ಪ್ರಯತ್ನಿಸುತ್ತೇವೆ. ಸದುದ್ದೇಶದಿಂದ ಅಥವಾ ಸಾರ್ವಜನಿಕ ಹಿತಾಸಕ್ತಿಯಲ್ಲಿ ಕಾಳಜಿ ವ್ಯಕ್ತಪಡಿಸಿದರೆ ಅಥವಾ ಬಹಿರಂಗಪಡಿಸಿದರೆ ಯಾರನ್ನೂ ಶಿಕ್ಷಿಸಬಾರದು.

12. ನಮ್ಮ ವ್ಯವಹಾರಗಳ ನಾಯಕರು ತಮ್ಮ ನಡವಳಿಕೆಯ ಮೂಲಕ ಮತ್ತು ಅವರ ಕಂಪನಿಗಳಲ್ಲಿ ಸೂಕ್ತವಾದ ಪ್ರಕ್ರಿಯೆಗಳನ್ನು ಸ್ಥಾಪಿಸುವ ಮೂಲಕ ಈ ಸಂಹಿತೆಯಲ್ಲಿ ನಿಗದಿಪಡಿಸಿದ ನೈತಿಕ ಮಾನದಂಡಗಳಿಗೆ ತಮ್ಮ ಬದ್ಧತೆಯನ್ನು ಪ್ರದರ್ಶಿಸಬೇಕೆಂದು ನಾವು ನಿರೀಕ್ಷಿಸುತ್ತೇವೆ.

13. ನಾವು ಕಾರ್ಯನಿರ್ವಹಿಸುವ ದೇಶಗಳ ಕಾನೂನುಗಳು ಮತ್ತು ನಮಗೆ ಅನ್ವಯಿಸುವ ಇತರ ಯಾವುದೇ ಕಾನೂನುಗಳನ್ನು ನಾವು ಅನುಸರಿಸುತ್ತೇವೆ. ಅನ್ವಯವಾಗುವ ಕಾನೂನು ಅಥವಾ ಉದ್ಯೋಗ ನಿಯಮಗಳ ಅಡಿಯಲ್ಲಿ ಸ್ಪಷ್ಟವಾಗಿ ವ್ಯವಹರಿಸಲಾದ ಸಂಹಿತೆಯ ನಿಬಂಧನೆಗಳಿಗೆ ಸಂಬಂಧಿಸಿದಂತೆ, ಕಾನೂನು ಮತ್ತು ನಿಯಮಗಳು ಆದ್ಯತೆಯನ್ನು ನೀಡುತ್ತವೆ. ಅನ್ವಯವಾಗುವ ಯಾವುದೇ ಕಾನೂನಿನ ಅಡಿಯಲ್ಲಿ ಸೂಚಿಸಲಾದ ಮಾನದಂಡಗಳು ಸಂಹಿತೆಗಿಂತ ಕಡಿಮೆಯಿದ್ದರೆ, ಸಂಹಿತೆಯ ನಿಬಂಧನೆಗಳ ಪ್ರಕಾರ ನಾವು ಅನುಸರಿಸುತ್ತೇವೆ.

**ನೆನಪಿಡಿ...**

ಉತ್ತಮ ಆಶಯ ಎಂದರೆ ನೀವು ಒದಗಿಸಿದ ಮಾಹಿತಿ ನಿಜವಾಗಿದೆ ಎನ್ನುವ ವಿಶ್ವಾಸ ಹೊಂದಿರುವುದು. ಸಂಭಾವ್ಯ ಉಲ್ಲಂಘನೆ ಅಥವಾ ವರದಿಯಾದ ಪ್ರಕರಣದ ಬಗ್ಗೆ 'ಎಲ್ಲಾ ಪುರಾವೆಗಳನ್ನು' ಹೊಂದಿರುವುದು ಇದರ ಅರ್ಥವಲ್ಲ.

# ನಮ್ಮ ಉದ್ಯೋಗಿಗಳು




> ಒಮ್ಮೆ ನೀವು ನಮ್ಮ ಮೌಲ್ಯಗಳು ಮತ್ತು ಆದರ್ಶಗಳನ್ನು ಹಂಚಿಕೊಂಡ ಉತ್ತಮ ವ್ಯಕ್ತಿಯನ್ನು ಪಡೆದರೆ, ನಾವು ಅವರನ್ನು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಬಿಡುತ್ತೇವೆ. ನಾವು ಅವರನ್ನು ಬಂಧಿಸುವುದಿಲ್ಲ. ನಾವು ಅವರನ್ನು ಪ್ರೋತ್ಸಾಹಿಸುತ್ತೇವೆ ಮತ್ತು ನಾಯಕತ್ವಕ್ಕೆ ಅವಕಾಶಗಳನ್ನು ನೀಡುತ್ತೇವೆ.

**ಜೆ.ಆರ್.ಡಿ ಟಾಟಾ**

ಅಧ್ಯಕ್ಷರು, ಟಾಟಾ ಸನ್ಸ್ (1938 - 1991)

## ಡಿ. ನಮ್ಮ ಉದ್ಯೋಗಿಗಳು

### ಸಮಾನ ಅವಕಾಶದ ಮಾಲೀಕ

1. ನಮ್ಮ ಕಂಪನಿಯಲ್ಲಿ ಉದ್ಯೋಗಕ್ಕಾಗಿ ನಮ್ಮ ಎಲ್ಲಾ ಉದ್ಯೋಗಿಗಳಿಗೆ ಮತ್ತು ಎಲ್ಲಾ ಅರ್ಹ ಅರ್ಜಿದಾರರಿಗೆ ಸಮಾನ ಅವಕಾಶಗಳನ್ನು ನೀಡುತ್ತೇವೆ. ಜನಾಂಗ, ಜಾತಿ, ''ರ್ಮ, ಬಣ್ಣ, ಪೂರ್ವಜರು, ವೈವಾಹಿಕ ಸ್ಥಿತಿ, ಲಿಂಗ, ಲೈಂಗಿಕ ದೃಷ್ಟಿಕೋನ, ವಯಸ್ಸು, ರಾಷ್ಟ್ರೀಯತೆ, ಜನಾಂಗೀಯ ಮೂಲ, ಅಂಗವೈಕಲ್ಯ ಅಥವಾ ಅನ್ವಯವಾಗುವ ಕಾನೂನಿನಿಂದ ರಕ್ಷಿಸಲ್ಪಟ್ಟ ಯಾವುದೇ ವರ್ಗವನ್ನು ಒಳಗೊಂಡಂತೆ ನಾವು ಯಾವುದೇ ಆಧಾರದ ಮೇಲೆ ಅನ್ಯಾಯವಾಗಿ ತಾರತಮ್ಯ ಮಾಡುವುದಿಲ್ಲ.
2. ನಮ್ಮ ಉದ್ಯೋಗಿಗಳನ್ನು ನೇಮಿಸುವಾಗ, ಬೆಳೆಸುವಾಗ ಮತ್ತು ಪ್ರಚಾರ ಮಾಡುವಾಗ, ನಮ್ಮ ನಿರ್ಧಾರಗಳು ಕೇವಲ ಕಾರ್ಯಕ್ಷಮತೆ, ಅರ್ಹತೆ, ಸಾಮರ್ಥ್ಯ ಮತ್ತು ಸಾಮರ್ಥ್ಯವನ್ನು ಆಧರಿಸಿರುತ್ತವೆ.
3. ಅನ್ವಯವಾಗುವ ಕಾನೂನು ಮತ್ತು ಸಂಹಿತೆಯ ಇತರ ನಿಬಂಧನೆಗಳಿಗೆ ಅನುಸಾರವಾಗಿ ವೈವಿಧ್ಯತೆ ಮತ್ತು ಸಮಾನತೆಯನ್ನು ಉತ್ತೇಜಿಸುವ ನ್ಯಾಯಯುತ, ಪಾರದರ್ಶಕ ಮತ್ತು ಸ್ಪಷ್ಟವಾದ ಉದ್ಯೋಗಿ ನೀತಿಗಳನ್ನು ನಾವು ಹೊಂದಿರುತ್ತೇವೆ. ಈ ನೀತಿಗಳು ಉದ್ಯೋಗ, ತರಬೇತಿ, ಅಭಿವೃದ್ಧಿ ಮತ್ತು ಕಾರ್ಯಕ್ಷಮತೆ ನಿರ್ವಹಣೆಯ ಸ್ಪಷ್ಟ ನಿಯಮಗಳನ್ನು ಒದಗಿಸುತ್ತವೆ.

### ಪ್ರಶ್ನೆ ಮತ್ತು ಉತ್ತರಗಳು

**ಕೆಲಸದ ಅವಶ್ಯಕತೆಯು ವ್ಯಾಪಕ ಪ್ರಯಾಣವನ್ನು ಒಳಗೊಂಡಿರುತ್ತದೆ. ಅ''ರ್ಥಿಗಳಲ್ಲಿ ಒಬ್ಬರು ಅತ್ಯುತ್ತಮವಾದ ಸೂಕ್ತ ಅನು''ವ ಮತ್ತು ಅರ್ಹತೆಗಳನ್ನು ಹೊಂದಿದ್ದಾರೆ. ಆದರೆ, ಈ ಅಭ್ಯರ್ಥಿ ಒಂಟಿ ಪೋಷಕರಾಗಿದ್ದಾರೆ. ಇದರಿಂದಗಿ, ಅಂತಹ ಪರಿಸ್ಥಿತಿಯು ಈ ಅಭ್ಯರ್ಥಿಯ ಕೆಲಸದ ಅಗತ್ಯವನ್ನು ನಿಭಾಯಿಸುವ ಸಾಮರ್ಥ್ಯವನ್ನು ಗಮನಾರ್ಹವಾಗಿ ತಡೆಯುತ್ತದೆ ಎಂದು ನಾನು ಭಾವಿಸುತ್ತೇನೆ. ನಾನು ಏನು ಮಾಡಲಿ?**

ಸಂಹಿತೆಗೆ ಅನುಗುಣವಾಗಿ, ಉದ್ಯೋಗಿಯನ್ನು ನೇಮಕ ಮಾಡುವ ನಿರ್ಧಾರವು ಅರ್ಹತೆಯ ಆಧಾರದ ಮೇಲೆ ಇರಬೇಕು. ಅಭ್ಯರ್ಥಿಯು ಕೆಲಸದ ಪ್ರಯಾಣದ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುವುದಿಲ್ಲ ಎಂದು ನಾವು ಊಹಿಸಲು ಸಾಧ್ಯವಿಲ್ಲ. ಎಲ್ಲಾ ಅರ್ಹ ಅಭ್ಯರ್ಥಿಗಳಿಗೆ ಅವರು ಕೆಲಸದ ಪ್ರಯಾಣದ ಅವಶ್ಯಕತೆಗಳನ್ನು ನಿಭಾಯಿಸಬಲ್ಲರು ಎನ್ನುವುದನ್ನು ಪ್ರದರ್ಶಿಸಲು ಅಥವಾ ಸಮರ್ಥಿಸಲು ಸಮಾನ ಅವಕಾಶವನ್ನು ನೀಡಬೇಕು. ಒಂಟಿ ಪೋಷಕರಾಗಿರುವುದು ನಮ್ಮ ಕಂಪನಿಯಲ್ಲಿ ನೇಮಕಾತಿ ಅಥವಾ ನಡೆಯುತ್ತಿರುವ ಉದ್ಯೋಗದ ಯಾವುದೇ ಹಂತದಲ್ಲಿ ತಾರತಮ್ಯಕ್ಕೆ ಕಾರಣವಾಗುವುದಿಲ್ಲ.

### ನೆನಪಿಡಿ...

ನಾವು ಯಾವುದೇ ರೀತಿಯ ಕಿರುಕುಳವನ್ನು ಸಹಿಸುವುದಿಲ್ಲ ಆದ್ದರಿಂದ ಪ್ರತಿಯೊಬ್ಬ ಉದ್ಯೋಗಿಯು ಕೆಲಸದ ಸ್ಥಳದಲ್ಲಿ ಇಂತಹ ದುಷ್ಕೃತ್ಯಗಳನ್ನು ಪ್ರೋತ್ಸಾಹಿಸಬಾರದೆಂದು ನಾವು ನಿರೀಕ್ಷಿಸುತ್ತೇವೆ.

## ಪ್ರತಿಷ್ಠೆ ಮತ್ತು ಗೌರವ

4. ಸಹಿಷ್ಣುತೆ, ತಿಳುವಳಿಕೆ, ಪರಸ್ಪರ ಸಹಕಾರ ಮತ್ತು ವೈಯಕ್ತಿಕ ಗೌಪ್ಯತೆಗೆ ಗೌರವದ ಮೇಲೆ ನಿರ್ಮಿಸಲಾದ ಅನುಕೂಲಕರ ಕೆಲಸದ ವಾತಾವರಣವನ್ನು ಸೃಷ್ಟಿಸಲು ನಮ್ಮ ನಾಯಕರು ಜವಾಬ್ದಾರರಾಗಿರುತ್ತಾರೆ.

5. ನಮ್ಮ ಕೆಲಸದ ವಾತಾವರಣದಲ್ಲಿರುವ ಪ್ರತಿಯೊಬ್ಬರನ್ನು ಘನತೆ ಮತ್ತು ಗೌರವದಿಂದ ನಡೆಸಿಕೊಳ್ಳಬೇಕು. ಲೈಂಗಿಕ, ದೈಹಿಕ, ಮೌಖಿಕ ಅಥವಾ ಮಾನಸಿಕ ಯಾವುದೇ ರೀತಿಯ ಕಿರುಕುಳವನ್ನು ನಾವು ಸಹಿಸುವುದಿಲ್ಲ.

6. ನಾವು ಸ್ಪಷ್ಟವಾದ ಮತ್ತು ಶಿಸ್ತುಬದ್ಧ ಪ್ರಕ್ರಿಯೆಗಳನ್ನು ಹೊಂದಿದ್ದು, ಇದು ಉದ್ಯೋಗಿಯ ಮಾತನ್ನು ಕೇಳುವ ಅಗತ್ಯ ಹೊಂದಿದೆ.

7. ನಮ್ಮ ಉದ್ಯೋಗಿಗಳ ಗೌಪ್ಯತೆಯ ಹಕ್ಕನ್ನು ನಾವು ಗೌರವಿಸುತ್ತೇವೆ. ನಮ್ಮ ಕೆಲಸದ ವಾತಾವರಣದ ಹೊರಗಿನ ಅವರ ನಡವಳಿಕೆಯ ಬಗ್ಗೆ ನಮಗೆ ಯಾವುದೇ ಸಮಸ್ಯೆ ಇರುವುದಿಲ್ಲ, ಅಂತಹ ನಡವಳಿಕೆಯು ಅವರ ಕೆಲಸದ ಕಾರ್ಯಕ್ಷಮತೆಯನ್ನು ಕುಂಠಿತಗೊಳಿಸದಿದ್ದರೆ, ಹಿತಾಸಕ್ತಿಯ ಸಂಘರ್ಷಗಳನ್ನು ಸೃಷ್ಟಿಸುತ್ತದೆ ಅಥವಾ ನಮ್ಮ ಖ್ಯಾತಿ ಅಥವಾ ವ್ಯಾಪಾರ ಹಿತಾಸಕ್ತಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

## ಮಾನವ ಹಕ್ಕುಗಳು

8. ನಾವು ನಮ್ಮ ಕೆಲಸದ ಸ್ಥಳಗಳಲ್ಲಿ ಬಾಲಕಾರ್ಮಿಕರನ್ನು ನೇಮಿಸುವುದಿಲ್ಲ.

9. ನಾವು ಯಾವುದೇ ರೂಪದಲ್ಲಿ ಒತ್ತಾಯಪೂರ್ವಕವಾಗಿ ಕಾರ್ಮಿಕರನ್ನು ಬಳಸುವುದಿಲ್ಲ. ನಾವು ನಮ್ಮ ಉದ್ಯೋಗಿಗಳ ವೈಯಕ್ತಿಕ ದಾಖಲೆಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಿಲ್ಲ ಅಥವಾ ನಮ್ಮೊಂದಿಗೆ ಉದ್ಯೋಗವನ್ನು ಭದ್ರಪಡಿಸಿಕೊಳ್ಳಲು ಅಥವಾ ನಮ್ಮೊಂದಿಗೆ ಕೆಲಸ ಮಾಡಲು ನಮಗೆ ಅಥವಾ ಬೇರೆಯವರಿಗೆ ಯಾವುದೇ ಪಾವತಿಯನ್ನು ಮಾಡಲು ಒತ್ತಾಯಿಸುವುದಿಲ್ಲ.

## ಲಂಚ ಮತ್ತು ಭ್ರಷ್ಟಾಚಾರ

10. ನಮ್ಮ ಉದ್ಯೋಗಿಗಳು ಮತ್ತು ಏಜೆಂಟ್‌ಗಳು ಮತ್ತು ಮಧ್ಯವರ್ತಿಗಳನ್ನು ಒಳಗೊಂಡಂತೆ ನಮ್ಮನ್ನು ನೇರವಾಗಿ ಅಥವಾ ಪರೋಕ್ಷವಾಗಿ ಪ್ರತಿನಿಸುವವರು, ಯಾವುದೇ ಅಕ್ರಮ ಅಥವಾ ಅನುಚಿತ ಪಾವತಿಗಳನ್ನು ಅಥವಾ ಹೋಲಿಸಬಹುದಾದ ಪ್ರಯೋಜನಗಳನ್ನು ನೀಡುವುದಿಲ್ಲ ಅಥವಾ ಸ್ವೀಕರಿಸುವುದಿಲ್ಲ, ಅದು ನಮ್ಮ ವ್ಯವಹಾರದ ನಡವಳಿಕೆಗಾಗಿ ಅನಗತ್ಯವಾದ ಅನುಕೂಲಗಳನ್ನು ಪಡೆಯಲು ಉದ್ದೇಶಿಸಲಾಗಿದೆ ಅಥವಾ ಗ್ರಹಿಸಲಾಗಿದೆ.

### ನೆನಪಿಡಿ...

ಲಂಚವಿರೋಧಿ, ಭ್ರಷ್ಟಾಚಾರವಿರೋಧಿ, ಸ್ಪರ್ಧೆವಿರೋಧಿ, ದತ್ತಾಂಶ ಗೌಪ್ಯತೆ ಇತ್ಯಾದಿಗಳಿಗೆ ಸಂಬಂಸಿದ ಯಾವುದೇ ಕಾನೂನನ್ನು ಯಾವುದೇ ಉದ್ಯೋಗಿ ಉಲ್ಲಂಘಿಸಿದರೆ ಹಣಕಾಸಿನ ದಂಡ ವಿಸಲಾಗುತ್ತದೆ ಮತ್ತು ಕಂಪನಿಗೆ ಸರಿಪಡಿಸಲಾಗದ ಪ್ರತಿಷ್ಠಿತ ಹಾನಿಯನ್ನು ಉಂಟುಮಾಡಬಹುದು.

## ಉಡುಗೊರೆಗಳು ಮತ್ತು ಅತಿಥ್ಯ

11. ವ್ಯಾಪಾರದ ಉಡುಗೊರೆಗಳು ಮತ್ತು ಆತಿಥ್ಯವನ್ನು ಕೆಲವೊಮ್ಮೆ ವ್ಯಾಪಾರ ಚಟುವಟಿಕೆಯ ಸಾಮಾನ್ಯ ವಿಧಾನದಲ್ಲಿ ಬಳಸಲಾಗುತ್ತದೆ. ಆದರೆ, ಉಡುಗೊರೆಗಳು ಅಥವಾ ಆಗಾಗ್ಗೆ ಆತಿಥ್ಯದ ಕೊಡುಗೆಗಳು (ಮನರಂಜನೆ ಅಥವಾ ಪ್ರಯಾಣ ಸೇರಿದಂತೆ) ಅಥವಾ ದುಬಾರಿ ಮೌಲ್ಯದ್ದಾಗಿದ್ದರೆ, ಅವು ಗ್ರಹಿಕೆ ಅಥವಾ ಆಸಕ್ತಿಯ ನಿಜವಾದ ಸಂಘರ್ಷ ಅಥವಾ 'ಅಕ್ರಮ ಪಾವತಿ'ಯ ಗ್ರಹಿಕೆಯನ್ನು ಉಂಟುಮಾಡಬಹುದು. ಆದ್ದರಿಂದ, ನೀಡಿದ ಅಥವಾ ಸ್ವೀಕರಿಸಿದ ಉಡುಗೊರೆಗಳು ಮತ್ತು ಆತಿಥ್ಯವು ಸಾಧಾರಣ ಮೌಲ್ಯ ಹೊಂದಿರಬೇಕು ಮತ್ತು ಸೂಕ್ತವಾಗಿರಬೇಕು ಹಾಗೂ ನಮ್ಮ ಕಂಪನಿಯ ಉಡುಗೊರೆಗಳು ಮತ್ತು ಆತಿಥ್ಯ ನೀತಿಗೆ ಅನುಗುಣವಾಗಿರಬೇಕು.

## ಸಂಘದ ಸ್ವಾತಂತ್ರ್ಯ

12. ಉದ್ಯೋಗಿಗಳು ಸಂಘಗಳಿಗೆ ಸೇರಲು ಅಥವಾ ತಮ್ಮ ವೈಯಕ್ತಿಕ ಸಾಮರ್ಥ್ಯಗಳಲ್ಲಿ ನಾಗರಿಕ ಅಥವಾ ಸಾರ್ವಜನಿಕ ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಆಸಕ್ತಿ ಹೊಂದಿರಬಹುದು ಎಂದು ನಾವು ಗುರುತಿಸುತ್ತೇವೆ, ಅಂತಹ ಚಟುವಟಿಕೆಗಳು ನಮ್ಮ ಕಂಪನಿಯ ಹಿತಾಸಕ್ತಿಗಳೊಂದಿಗೆ ಸಂಘರ್ಷವನ್ನು ಸೃಷ್ಟಿಸುವುದಿಲ್ಲ. ಈ ಸಂಹಿತೆಯ 'ಹಿತಾಸಕ್ತಿ ಸಂಘರ್ಷಗಳು' ಷರತ್ತಿನ ಪ್ರಕಾರ ಮತ್ತು ಅನ್ವಯವಾಗುವ ಕಂಪನಿ ನೀತಿಗಳು ಮತ್ತು ಕಾನೂನಿಗೆ ಅನುಸಾರವಾಗಿ ನಮ್ಮ ಉದ್ಯೋಗಿಗಳು ಸೂಚಿಸಬೇಕು ಮತ್ತು ಅಂತಹ ಯಾವುದೇ ಚಟುವಟಿಕೆಗೆ ಪೂರ್ವಾನುಮತಿ ಪಡೆಯಬೇಕು.

### ನೆನಪಿಡಿ...

ಸಾಮಾನ್ಯ ನಿಯಮವಾಗಿ, ನಾವು ಈ ಕೆಳಗಿನ ಉಡುಗೊರೆಗಳನ್ನು ಮಾತ್ರ ಉದ್ದಿಮೆ ಅಸೋಸಿಯೇಟ್ ನಿಂದ ಉಡುಗೊರೆ ಅಥವಾ ಆತಿಥ್ಯದ ರೂಪದಲ್ಲಿ ಸ್ವೀಕರಿಸಬಹುದು:

- ಸಾಧಾರಣ ಮೌಲ್ಯ ಹೊಂದಿದ್ದು ನೀಡಿರುವ ವ್ಯಕ್ತಿ ಯಾವುದೇ ವಿ‘'ದ ಆದ್ಯತೆಯ ಉಡುಗೊರೆಯಾಗಿ ನೀಡುತ್ತಿದ್ದಾರೆ ಎನ್ನುವ ಗ್ರಹಿಕೆ ಬರುವಂತಿರಬಾರದು (ಅಥವಾ ಸೂಚಿತ ಬಾಧ್ಯತೆ).
- ನಮ್ಮ ಕಂಪನಿಯ ಹಿತದೃಷ್ಟಿಯಿಂದ ಕಾರ್ಯನಿರ್ವಹಿಸುವ ನಮ್ಮ ಸಾಮರ್ಥ್ಯದ ಮೇಲೆ ಪ್ರಭಾವ ಬೀರುವುದಿಲ್ಲ ಅಥವಾ ಪರಿಣಾಮವಾಗುವುದಿಲ್ಲ.
- ಸಾರ್ವಜನಿಕವಾಗಿ ಬಹಿರಂಗಪಡಿಸಿದರೆ ನಮ್ಮ ಕಂಪನಿ ಅಥವಾ ನೀಡುವವರಿಗೆ ಮುಜುಗರವಾಗುವುದಿಲ್ಲ

ಕೆಳಗಿನ ಉಡುಗೊರೆಗಳು ಎಂದಿಗೂ ಸೂಕ್ತವಲ್ಲ ಮತ್ತು ಎಂದಿಗೂ ನೀಡಬಾರದು ಅಥವಾ ಸ್ವೀಕರಿಸಬಾರದು:

- ನಗದು ಅಥವಾ ಚಿನ್ನ ಅಥವಾ ಇತರ ಅಮೂಲ್ಯ ಲೋಹಗಳು, ರತ್ನಗಳು ಅಥವಾ ಕಲ್ಲುಗಳ ಉಡುಗೊರೆಗಳು;
- ಅನ್ವಯವಾಗುವ ಕಾನೂನಿನ ಅಡಿಯಲ್ಲಿ ನಿಷೇಸಲಾದ ಉಡುಗೊರೆಗಳು;
- ಲಂಚ, ಪಾವತಿ, ಕಿಕ್‌ಬ್ಯಾಕ್ ಅಥವಾ ಸುಗಮ ಪಾವತಿಯ ಸ್ವರೂಪದಲ್ಲಿರುವ ಉಡುಗೊರೆಗಳು*;
- ಉಡುಗೊರೆ ನೀಡುವವರ ಅಥವಾ ಸ್ವೀಕರಿಸುವವರ ಸಂಸ್ಥೆಯಿಂದ ನಿಷೇಸಲ್ಪಟ್ಟ ಉಡುಗೊರೆಗಳು; ಮತ್ತು
- ಸೇವೆಗಳ ರೂಪದಲ್ಲಿ ಉಡುಗೊರೆಗಳು ಅಥವಾ ಇತರ ನಗದುರಹಿತ ಪ್ರಯೋಜನಗಳು (ಉದಾ. ಉದ್ಯೋಗದ ‘'ರವಸೆ).

(*ಸೌಲಭ್ಯ ಪಾವತಿಯು ನಿಯಮಿತ ಕಾನೂನು ಸರ್ಕಾರವನ್ನು ಸುರಕ್ಷಿತಗೊಳಿಸಲು ಅಥವಾ ವೇಗಗೊಳಿಸಲು ಮಾಡಿದ ಪಾವತಿಯಾಗಿದೆ ಪರವಾನಗಿಗಳನ್ನು ನೀಡುವುದು ಅಥವಾ ಕಸ್ಟಮ್ಸ್‌ನಲ್ಲಿರುವ ಸರಕುಗಳನ್ನು ಬಿಡುಗಡೆ ಮಾಡುವಂತಹ ಕ್ರಮಗಳು.)

## ನಮ್ಮೊಂದಿಗೆ ಉದ್ಯೋಗದ ಹೊರಗೆ ಕೆಲಸ ಮಾಡುವುದು

13. ಉದ್ಯೋಗವನ್ನು ತೆಗೆದುಕೊಳ್ಳುವುದು, ಜವಾಬ್ದಾರಿಯುತ ಸ್ಥಾನವನ್ನು ಸ್ವೀಕರಿಸುವುದು ಅಥವಾ ನಮ್ಮ ಕಂಪನಿಯೊಂದಿಗೆ ಉದ್ಯೋಗದ ಹೊರಗೆ ವ್ಯಾಪಾರವನ್ನು ನಡೆಸುವುದು, ನಿಮ್ಮ ಸ್ವಂತ ಸಮಯದಲ್ಲಿ, ಸಂಭಾವನೆಯೊಂದಿಗೆ ಅಥವಾ ಇಲ್ಲದೆ, ನಮ್ಮ ಕಂಪನಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುವ ಅಥವಾ ಆಸಕ್ತಿಯ ಸಂಘರ್ಷಗಳನ್ನು ಸೃಷ್ಟಿಸುವ ನಿಮ್ಮ ಸಾಮರ್ಥ್ಯಕ್ಕೆ ಅಡ್ಡಿಯಾಗಬಹುದು. ಅಂತಹ ಯಾವುದೇ ಚಟುವಟಿಕೆಯು ನಮ್ಮ ಕಂಪನಿಯ ಯಾವುದೇ ಗ್ರಾಹಕ, ಪೂರೈಕೆದಾರ, ವಿತರಕ ಅಥವಾ ಪ್ರತಿಸ್ಪರ್ಧಿಯೊಂದಿಗೆ ಇರಬಾರದು. ಈ ಕೋಡ್ನ 'ಹಿತಾಸಕ್ತಿ ಸಂಘರ್ಷಗಳು' ಷರತ್ತಿನ ಪ್ರಕಾರ ಮತ್ತು ಅನ್ವಯವಾಗುವ ಕಂಪನಿ ನೀತಿಗಳು ಮತ್ತು ಕಾನೂನಿಗೆ ಅನುಸಾರವಾಗಿ ನಮ್ಮ ಉದ್ಯೋಗಿಗಳು ಸೂಚಿಸಬೇಕು ಮತ್ತು ಅಂತಹ ಯಾವುದೇ ಚಟುವಟಿಕೆಗೆ ಪೂರ್ವಾನುಮತಿ ಪಡೆಯಬೇಕು.

## ಮಾಹಿತಿ ಮತ್ತು ಚರಾಸ್ತಿಯ ಸಮಗ್ರತೆ

14. ನಮ್ಮ ಉದ್ಯೋಗಿಗಳು ಯಾವುದೇ ಉದ್ದೇಶಪೂರ್ವಕ ತಪ್ಪುಗಳನ್ನು ಮಾಡಬಾರದು ಅಥವಾ ಹಣಕಾಸಿನ ವಿವರಣೆಗಳು ಒಳಗೊಂಡಂತೆ ನಮ್ಮ ದಾಖಲೆಗಳು, ಆಂತರಿಕ ಅಥವಾ ಬಾಹ್ಯ ಸಂವಹನಗಳು ಮತ್ತು ವರದಿಗಳ ಸಮಗ್ರತೆಯನ್ನು ರಾಜಿ ಮಾಡಿಕೊಳ್ಳುವ ತಪ್ಪು ಮಾಡಬಾರದು.

15. ಕಂಪನಿ ಅಥವಾ ವ್ಯವಹಾರ-ಸಂಬಂತ ಮಾಹಿತಿಯನ್ನು ಬಹಿರಂಗಪಡಿಸುವ ಮೊದಲು ನಮ್ಮ ಉದ್ಯೋಗಿಗಳು ಮತ್ತು ನಿರ್ದೇಶಕರು ಸರಿಯಾದ ಅಕಾರವನ್ನು ಹೊಂದಿರಬೇಕು ಮತ್ತು ಅಂತಹ ಬಹಿರಂಗಪಡಿಸುವಿಕೆಗಳನ್ನು ನಮ್ಮ ಕಂಪನಿಯ ಮಾಧ್ಯಮ ಮತ್ತು ಸಂವಹನ ನೀತಿಗೆ ಅನುಗುಣವಾಗಿ ಮಾಡಲಾಗುತ್ತದೆ. ಇದು ಸಾಮಾಜಿಕ ಮಾಧ್ಯಮ ಸೇರಿದಂತೆ ಯಾವುದೇ ವೇದಿಕೆ ಅಥವಾ ಮಾಧ್ಯಮದ ಮೂಲಕ ಬಹಿರಂಗಪಡಿಸುವಿಕೆಯನ್ನು ಒಳಗೊಂಡಿರುತ್ತದೆ.

16. ನಮ್ಮ ಉದ್ಯೋಗಿಗಳು ನಮ್ಮ ಕಂಪನಿಗೆ ಒದಗಿಸಿದ ವೈಯಕ್ತಿಕ ದತ್ತಾಂಶ ಅಥವಾ ಮಾಹಿತಿಯ ಸಮಗ್ರತೆಯನ್ನು ಖಚಿತಪಡಿಸಿಕೊಳ್ಳಬೇಕು. ಅನ್ವಯವಾಗುವ ಕಂಪನಿ ನೀತಿಗಳು ಅಥವಾ ಕಾನೂನಿಗೆ ಅನುಸಾರವಾಗಿ ನಮಗೆ ನೀಡಲಾದ ಎಲ್ಲಾ ಡೇಟಾ ಅಥವಾ ಮಾಹಿತಿಯ ಗೌಪ್ಯತೆಯನ್ನು ನಾವು ರಕ್ಷಿಸುತ್ತೇವೆ.

17. ನಮ್ಮ ಉದ್ಯೋಗಿಗಳು ನಮ್ಮ ಕಂಪನಿಯ ಎಲ್ಲಾ ಗೌಪ್ಯ ಮಾಹಿತಿ ಮತ್ತು ಎಲ್ಲಾ ಬೌದ್ಧಿಕ ಆಸ್ತಿಗಳನ್ನು ಗೌರವಿಸಬೇಕು ಮತ್ತು ರಕ್ಷಿಸಬೇಕು.

18. ನಮ್ಮ ಉದ್ಯೋಗಿಗಳು ಎಲ್ಲಾ ಮೂರನೇ ವ್ಯಕ್ತಿಯ ಬೌದ್ಧಿಕ ಆಸ್ತಿ ಮತ್ತು ದತ್ತಾಂಶ ಗೌಪ್ಯತೆಯನ್ನು ಕಾಪಾಡುತ್ತಾರೆ. ನಮ್ಮ ಉದ್ಯೋಗಿಗಳು ತಮ್ಮ ಸ್ವಾನಕ್ಕೆ ಬರುವ ಅಂತಹ ಬೌದ್ಧಿಕ ಆಸ್ತಿ ಮತ್ತು ಡೇಟಾವನ್ನು ದುರುಪಯೋಗಪಡಿಸಿಕೊಳ್ಳಬಾರದು ಮತ್ತು ಅನ್ವಯಿಸುವ ಕಂಪನಿ ನೀತಿಗಳು ಅಥವಾ ಕಾನೂನಿಗೆ ಅನುಸಾರವಾಗಿ ಹೊರತುಪಡಿಸಿ ಅದನ್ನು ಯಾರೊಂದಿಗೂ ಹಂಚಿಕೊಳ್ಳಬಾರದು.

19. ನಮ್ಮ ಕಂಪನಿಯ ಅಥವಾ ಯಾವುದೇ ಮೂರನೇ ವ್ಯಕ್ತಿಯ ಯಾವುದೇ ಗೌಪ್ಯ ಮಾಹಿತಿ ಅಥವಾ ಬೌದ್ಧಿಕ ಆಸ್ತಿ ಮತ್ತು ದತ್ತಾಂಶ ನಷ್ಟ, ಕಳ್ಳತನ ಅಥವಾ ನಾಶವನ್ನು ನಮ್ಮ ಉದ್ಯೋಗಿಗಳು ಕೂಡಲೇ ವರದಿ ಮಾಡುತ್ತಾರೆ.

### ಪ್ರಶ್ನೆ ಮತ್ತು ಉತ್ತರಗಳು

**ನಾನು ನನ್ನ ಕಂಪನಿಯ ಹಣಕಾಸು ವಿಭಾಗದಲ್ಲಿ ಅಕೌಂಟೆಂಟ್ ಆಗಿದ್ದೇನೆ. ನನ್ನ ಕಲಾತ್ಮಕ ಕೌಶಲ್ಯದಿಂದ, ನಾನು ಮಕ್ಕಳ ಪ್ರಕಟಣೆಗಾಗಿ ಪೆನ್ ಕಾರ್ಟೂನ್‌ಗಳ ಪ್ರಸ್ತಾಪವನ್ನು ಸ್ವೀಕರಿಸಿದ್ದೇನೆ ಅದಕ್ಕಾಗಿ ನಾನು ಹಣ ಪಡೆಯುತ್ತೇನೆ. ವಾರಾಂತ್ಯದಲ್ಲಿ ಈ ಚಟುವಟಿಕೆಯನ್ನು ಕೈಗೊಳ್ಳಲು ನಾನು ಯೋಜಿಸುತ್ತೇನೆ. ಈ ಪ್ರಸ್ತಾಪವನ್ನು ಸ್ವೀಕರಿಸುವ ಮೊದಲು ನಾನು ಏನು ಮಾಡಬೇಕು?**

ಪ್ರಸ್ತಾಪವನ್ನು ಸ್ವೀಕರಿಸುವ ಮೊದಲು, ಕಂಪನಿಯ ನೀತಿಗಳು ಮತ್ತು ನಿಯಮಗಳು ನಿಮ್ಮ ಮೇಲ್ವಿಚಾರಕರಿಗೆ ಬಹಿರಂಗಪಡಿಸುವುದು ಅಗತ್ಯವೇ ಎಂದು ನೀವು ಖಚಿತಪಡಿಸಿಕೊಳ್ಳಬೇಕು, ಇದರಿಂದಾಗಿ ನೀವು ಈ ಚಟುವಟಿಕೆಯನ್ನು ಆರಂಭಿಸುವುದರಿಂದ ನಮ್ಮ ಕಂಪನಿಯ ಹಿತಾಸಕ್ತಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆಯೇ ಎಂದು ಕಂಪನಿಯು ನಿರ್ಧರಿಸಬಹುದು. ಅದು ಹಾಗೆ ಮಾಡುವುದಿಲ್ಲ ಎಂದು ಕಂಪನಿ ದೃಢೀಕರಿಸಿದ ನಂತರ, ನೀವು ಚಟುವಟಿಕೆಯನ್ನು ತೆಗೆದುಕೊಳ್ಳಲು ಮುಕ್ತರಾಗಿರುತ್ತೀರಿ. ನೀವು ಬಹಿರಂಗಪಡಿಸಿದ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆ ಕಂಡುಬಂದಾಗ ಕಂಪನಿಯ ಗಮನಕ್ಕೆ ತರುವುದು ನಿಮ್ಮ ಕರ್ತವ್ಯವಾಗಿದೆ.

20. ನಮ್ಮ ಉದ್ಯೋಗಿಗಳು ಕಂಪ್ಯೂಟರ್ ಮತ್ತು ಸಂವಹನ ಸಾಧನಗಳನ್ನು ಒಳಗೊಂಡಂತೆ ಕಂಪನಿಯ ಮೂರ್ತ ಹಾಗೂ ಅಮೂರ್ತವಾದ ಎಲ್ಲಾ ಸ್ವತ್ತುಗಳನ್ನುಬಳಸುತ್ತಾರೆ, ಅವುಗಳನ್ನು ನೀಡಿದ ಉದ್ದೇಶಕ್ಕಾಗಿ ಮತ್ತು ನಮ್ಮ ವ್ಯವಹಾರವನ್ನು ನಡೆಸಲು. ಅಂತಹ ಆಸ್ತಿಗಳನ್ನು ದುರುಪಯೋಗಪಡಿಸಿಕೊಳ್ಳಬಾರದು. ನಮ್ಮ ಸ್ವತ್ತುಗಳ ವಂಚನೆ ಮತ್ತು ದುರುಪಯೋಗ ಅಥವಾ ದುರುಪಯೋಗದ ಅಪಾಯವನ್ನು ಕಡಿಮೆ ಮಾಡಲು ನಾವು ಪ್ರಕ್ರಿಯೆಗಳನ್ನು ಸ್ಥಾಪಿಸುತ್ತೇವೆ.

21. ನಾವು ಅನ್ವಯವಾಗುವ ಎಲ್ಲಾ ಹಣ ವಂಚನೆಗಳ ವಿರೋಧಿ, ವಂಚನೆ ಮತ್ತು ಭ್ರಷ್ಟಾಚಾರ–ವಿರೋ ಕಾನೂನುಗಳನ್ನು ಅನುಸರಿಸುತ್ತೇವೆ ಮತ್ತು ಅಂತಹ ಕಾನೂನುಗಳ ಯಾವುದೇ ಉಲ್ಲಂಘನೆಗಳನ್ನು ಪರಿಶೀಲಿಸಲು ಮತ್ತು ತಡೆಗಟ್ಟಲು ನಾವು ಪ್ರಕ್ರಿಯೆಗಳನ್ನು ಸ್ಥಾಪಿಸುತ್ತೇವೆ.

## ಆಂತರಿಕ ವ್ಯಾಪಾರ

22. ನಮ್ಮ ಉದ್ಯೋಗಿಗಳು ಯಾವುದೇ ರೀತಿಯ ಆಂತರಿಕ ವ್ಯಾಪಾರದಲ್ಲಿ ತೊಡಗಬಾರದು ಅಥವಾ ಸಾರ್ವಜನಿಕ ವಲಯದಲ್ಲಿ ಇಲ್ಲದ ಬೆಲೆ ಸೂಕ್ಷ್ಮ ಮಾಹಿತಿಯ ಪ್ರವೇಶ ಮತ್ತು ಸ್ವಾನದಿಂದ ಯಾವುದೇ ಪ್ರಯೋಜನವನ್ನು ಪಡೆಯಲು ತಕ್ಷಣದ ಕುಟುಂಬ, ಸ್ನೇಹಿತರು ಅಥವಾ ವ್ಯಾಪಾರ ಸಹವರ್ತಿಗಳು ಸೇರಿದಂತೆ ಇತರರಿಗೆ ಸಹಾಯ ಮಾಡಬಾರದು. ಅಂತಹ ಮಾಹಿತಿಯು ನಮ್ಮ ಕಂಪನಿ, ನಮ್ಮ ಗುಂಪು ಕಂಪನಿಗಳು, ನಮ್ಮ ಗ್ರಾಹಕರು ಮತ್ತು ನಮ್ಮ ಪೂರೈಕೆದಾರರ ಬಗ್ಗೆ ಮಾಹಿತಿಯನ್ನು ಒಳಗೊಂಡಿರುತ್ತದೆ.

## ಪ್ರಶ್ನೆ ಮತ್ತು ಉತ್ತರಗಳು

**ನಮ್ಮ ಕಂಪನಿಯು ಇತ್ತೀಚೆಗೆ ಹೊಸ ವ್ಯಾಪಾರ ಉಪಕ್ರಮವನ್ನು ಪ್ರಾರಂಭಿಸುವುದಾಗಿ ಘೋಷಿಸಿದೆ. ಇದಕ್ಕೆ ಸಂಬಂಸಿದಂತೆ, ಪ್ರಮುಖ ವ್ಯಾಪಾರ ಪತ್ರಿಕೆಯೊಂದರ ಪತ್ರಕರ್ತರಾಗಿರುವ ನಿಮ್ಮ ಸ್ನೇಹಿತರು ತಮ್ಮ ಮುಂಬರುವ ಲೇಖನದಲ್ಲಿ ಅವರು ಒಳಗೊಂಡಿರುವ ಕೆಲವು ಮಾಹಿತಿಯನ್ನು ಒದಗಿಸುವಂತೆ ಕೇಳಿದ್ದಾರೆ. ನಿಮ್ಮನ್ನು ಉಲ್ಲೇಖಿಸುವುದಿಲ್ಲ ಅಥವಾ ನಿಮ್ಮ ಗುರುತನ್ನು ಬಹಿರಂಗಪಡಿಸುವುದಿಲ್ಲ ಎಂದು ಅವರು "ರವಸೆ ನೀಡಿದ್ದಾರೆ. ನೀವು ಅವನಿಗೆ ಈ ಮಾಹಿತಿಯನ್ನು ನೀಡಬೇಕೇ?**

ಇಲ್ಲ. ಮೂಲವು ಅನಾಮಧೇಯವಾಗಿ ಉಳಿಯುತ್ತದೆ ಎಂದು ಭರವಸೆ ನೀಡಿದ್ದರೂ ಸಹ, ನೀವು ಈ ರೀತಿಯ ಮಾಹಿತಿಯನ್ನು ಮಾಧ್ಯಮಗಳೊಂದಿಗೆ ಹಂಚಿಕೊಳ್ಳಬಾರದು. ಕಂಪನಿಯಲ್ಲಿ ಅಕೃತ ಸಿಬ್ಬಂದಿಗೆ ಮಾತ್ರ ಮಾಧ್ಯಮಗಳೊಂದಿಗೆ ಮಾತನಾಡಲು ಮತ್ತು ಈ ರೀತಿಯ ಮಾಹಿತಿಯನ್ನು ಒದಗಿಸಲು ಅನುಮತಿಸಲಾಗಿದೆ.

**ನಮ್ಮ ಕಂಪನಿಯು ಸಾಮಾಜಿಕ ಮಾಧ್ಯಮದ ಬಳಕೆ ನೀತಿಯನ್ನು ಹೊಂದಿದೆ, ಅದು ನಿಮ್ಮ ಸ್ವಂತ ಸಮಯದಲ್ಲಿ ನೀವು ಅಂತಹ ಮಾಧ್ಯಮವನ್ನು ಪ್ರವೇಶಿಸಬಹುದಾದರೂ ಸಹ ಸಾಮಾಜಿಕ ಮಾಧ್ಯಮದ ಬಳಕೆಗಾಗಿ ಮಾಡಬೇಕಾದ್ದು ಮತ್ತು ಮಾಡಬಾರದು ಎಂದು ತಿಳಿಸುತ್ತದೆ. ಅಂತಹ ನೀತಿ ಏಕೆ?**

ಬಾಹ್ಯ ಸಂವಹನವು ಗಂಭೀರ ವಿಷಯವಾಗಿದೆ. ಇದನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು ಏಕೆಂದರೆ ನಮ್ಮ ಕಂಪನಿ ಅಥವಾ ಅದರ ವ್ಯವಹಾರಗಳನ್ನು ಉಲ್ಲೇಖಿಸುವ ಮಾಹಿತಿಯು ಸ್ಪಷ್ಟವಾಗಿರಬೇಕು, ಸತ್ಯವಾಗಿರಬೇಕು ಮತ್ತು ನಾವು ಇತರ ಪಕ್ಷಗಳಿಗೆ ನೀಡಿದ ಯಾವುದೇ ಜವಾಬ್ದಾರಿಗಳನ್ನು ಉಲ್ಲಂಘಿಸಬಾರದು. ಪ್ರತಿಯೊಂದು ವ್ಯವಹಾರದಲ್ಲಿಯೂ ಹೊರಗಿನ ಪ್ರಪಂಚಕ್ಕೆ ವಿವಿಧ ರೀತಿಯ ಹೇಳಿಕೆಗಳನ್ನು ಅಧಿಕೃತಗೊಳಿಸಲು ಮತ್ತು ಮಾಡಲು ನಾಮನಿರ್ದೇಶಿತ ವ್ಯವಸ್ಥಾಪಕರು ಇರುತ್ತಾರೆ. ನೀವು ಸ್ವೀಕರಿಸಬಹುದಾದ ಮಾಹಿತಿಗಾಗಿ ಅಥವಾ ನಾವು ನೀಡಬೇಕೆಂದು ನೀವು ಭಾವಿಸುವ ಮಾಹಿತಿಗಾಗಿ ಯಾವುದೇ ವಿನಂತಿಯ ಕುರಿತು ಈ ನಿರ್ವಾಹಕರನ್ನು ಸಂಪರ್ಕಿಸಬೇಕು. ಸಾಮಾಜಿಕ ಮಾಧ್ಯಮವನ್ನು ಬಳಸುವಾಗ, ನಿರ್ದಿಷ್ಟ ಬ್ಲಾಗ್‌ಗಳು ಅಥವಾ ಸಾಮಾಜಿಕ ನೆಟ್‌ವರ್ಕಿಂಗ್ ಸೈಟ್‌ಗಳಲ್ಲಿ, ನಮ್ಮ ಕಂಪನಿ ಅಥವಾ ನಾವು ಮಾಡುವ ವ್ಯವಹಾರದ ಕುರಿತು ಮಾತನಾಡುವಾಗ ನೀವು ಹೆಚ್ಚು ಜಾಗರೂಕರಾಗಿರಬೇಕು. ನೀವು ಸ್ನೇಹಿತರೊಂದಿಗೆ ಚಾಟ್ ಮಾಡುತ್ತಿರುವಂತೆ ಅಥವಾ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿರುವಂತೆ ಅನಿಸಬಹುದು ಆದರೆ ಹಾಗೆ ಮಾಡುವಾಗಲೂ ನಮ್ಮ ಕಂಪನಿಯ ಯಾವುದೇ ಗೌಪ್ಯ ಮಾಹಿತಿಯನ್ನು ನೀವು ಹಂಚಿಕೊಳ್ಳಲು ಸಾಧ್ಯವಿಲ್ಲ.

## ನೆನಪಿಡಿ...

ಅನಧಿಕೃತ ಸಾಫ್ಟ್‌ವೇರ್, ಟ್ರೇಡ್‌ಮಾರ್ಕ್‌ಗಳು, ಹಕ್ಕುಸ್ವಾಮ್ಯ ವಸ್ತು ಅಥವಾ ಲೋಗೋಗಳನ್ನು ನಕಲು ಮಾಡುವುದು ಅಥವಾ ಡೌನ್ಲೋಡ್ ಮಾಡುವುದು ಸೇರಿದಂತೆ ಅವರ ಸ್ವತ್ತುಗಳು, ಬೌದ್ಧಿಕ ಆಸ್ತಿ ಅಥವಾ ವ್ಯಾಪಾರ ರಹಸ್ಯಗಳನ್ನು ಎಂದಿಗೂ ದುರುಪಯೋಗಪಡಿಸಿಕೊಳ್ಳುವ ಮೂಲಕ ನಾವು ಇತರರ ಆಸ್ತಿ ಹಕ್ಕುಗಳನ್ನು ಗೌರವಿಸಬೇಕು. ನಾವು ಎಂದಿಗೂ ಕಂಪ್ಯೂಟರ್ ಸಾಫ್ಟ್‌ವೇರ್ ಪ್ರೋಗ್ರಾಂಗಳ ಅನಕೃತ ಪ್ರತಿಗಳನ್ನು ಮಾಡಬಾರದು ಅಥವಾ ಕಂಪನಿಯ ಕಂಪ್ಯೂಟರ್‌ಗಳಲ್ಲಿ ಪರವಾನಗಿ ಪಡೆಯದ ವೈಯಕ್ತಿಕ ಸಾಫ್ಟ್‌ವೇರ್ ಅನ್ನು ಬಳಸಬಾರದು.

## ನಿಷೇಧಿತ ಔಷಧಗಳು ಮತ್ತು ವಸ್ತುಗಳು

23. ನಿಷೇತ ಔಷಧಗಳು ಮತ್ತು ವಸ್ತುಗಳ ಬಳಕೆಯು ನಮ್ಮ ಕೆಲಸದ ಸ್ಥಳಗಳಲ್ಲಿ ನಿಜವಾದ ಸುರಕ್ಷತೆ ಮತ್ತು ಇತರ ಅಪಾಯಗಳನ್ನು ಸೃಷ್ಟಿಸುತ್ತದೆ. ನಮ್ಮ ಕೆಲಸದ ಸ್ಥಳಗಳಲ್ಲಿ ಅಥವಾ ಕಂಪನಿಯ ಕರ್ತವ್ಯಗಳ ಸಂದರ್ಭದಲ್ಲಿ ನಿಷೇತ ಔಷಧಗಳು ಮತ್ತು ವಸ್ತುಗಳನ್ನು ಹೊಂದುವುದನ್ನು, ಸೇವಿಸುವುದನ್ನು ಅಥವಾ ವಿತರಿಸುವುದನ್ನು ನಾವು ಸಹಿಸುವುದಿಲ್ಲ.

## ಹಿತಾಸಕ್ತಿಗಳ ಸಂಘರ್ಷ

24. ನಮ್ಮ ಉದ್ಯೋಗಿಗಳು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು ಯಾವಾಗಲೂ ನಮ್ಮ ಕಂಪನಿಯ ಹಿತಾಸಕ್ತಿಯಲ್ಲಿ ಕಾರ್ಯನಿರ್ವಹಿಸುತ್ತಾರೆ ಮತ್ತು ಅವರು ಹೊಂದಿರಬಹುದಾದ ನಿಕಟ ವೈಯಕ್ತಿಕ ಸಂಬಂಧಗಳನ್ನು ಒಳಗೊಂಡಂತೆ ಯಾವುದೇ ವ್ಯವಹಾರ ಅಥವಾ ವೈಯಕ್ತಿಕ ಸಂಘವು ನಮ್ಮ ಕಂಪನಿಯಲ್ಲಿ ಅವರ ಪಾತ್ರಗಳು ಮತ್ತು ಕರ್ತವ್ಯಗಳೊಂದಿಗೆ ಆಸಕ್ತಿಯ ಸಂಘರ್ಷವನ್ನು ಸೃಷ್ಟಿಸುವುದಿಲ್ಲ ಎಂದು ಖಚಿತಪಡಿಸಿಕೊಳ್ಳಬೇಕು. ನಮ್ಮ ಕಂಪನಿಯ ಕಾರ್ಯಾಚರಣೆಗಳು, ನಮ್ಮ ಉದ್ಯೋಗಿಗಳು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು ಯಾವುದೇ ವ್ಯವಹಾರ, ಸಂಬಂಧ ಅಥವಾ ಚಟುವಟಿಕೆಯಲ್ಲಿ ತೊಡಗಬಾರದು, ಅದು ನಮ್ಮ ಕಂಪನಿ ಅಥವಾ ನಮ್ಮ ಗುಂಪಿನ ಕಂಪನಿಗಳ ಹಿತಾಸಕ್ತಿಯೊಂದಿಗೆ ಘರ್ಷಣೆಯಾಗಬಹುದು.

25. ಯಾವುದೇ ವಾಸ್ತವ ಅಥವಾ ಸಂಭಾವ್ಯ ಆಸಕ್ತಿಯ ಘರ್ಷಣೆಗಳು ಉಂಟಾದರೆ, ಸಂಬಂಧಪಟ್ಟ ವ್ಯಕ್ತಿಯು ತಕ್ಷಣವೇ ಅಂತಹ ಘರ್ಷಣೆಗಳನ್ನು ವರದಿ ಮಾಡಬೇಕು ಮತ್ತು ಅನ್ವಯವಾಗುವ ಕಾನೂನು ಮತ್ತು ಕಂಪನಿ ನೀತಿಯಿಂದ ಅಗತ್ಯವಿರುವ ಅನುಮೋದನೆಗಳನ್ನು ಪಡೆಯಬೇಕು. ಸಕ್ಷಮ ಪ್ರಾಧಿಕಾರವು ನಮ್ಮ ಕಂಪನಿಯ ನೀತಿಯಲ್ಲಿ ವಿವರಿಸಿದಂತೆ ಸಮಂಜಸವಾದ ಸಮಯದೊಳಗೆ ಉದ್ಯೋಗಿಗೆ ಹಿಂತಿರುಗಿಸುತ್ತದೆ, ಇದರಿಂದಾಗಿ ಸಂಘರ್ಷವನ್ನು ತ್ವರಿತವಾಗಿ ಪರಿಹರಿಸಲು ಅಥವಾ ತಪ್ಪಿಸಲು ಸೂಚಿಸಿದಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸಂಬಂಧಪಟ್ಟ ಉದ್ಯೋಗಿಗೆ ಅನುವು ಮಾಡಿಕೊಡುತ್ತದೆ.

26. ಕಾರ್ಯನಿರ್ವಾಹಕ ನಿರ್ದೇಶಕರನ್ನು ಹೊರತುಪಡಿಸಿ ಎಲ್ಲಾ ಉದ್ಯೋಗಿಗಳ ವಿಷಯಕ್ಕೆ ಬಂದರೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ / ವ್ಯವಸ್ಥಾಪಕ ನಿರ್ದೇಶಕರು ಸಮರ್ಥ ಅಕಾರ ಹೊಂದಿರುತ್ತಾರೆ, ಅವರು ಅಂತಹ ಪ್ರಕರಣಗಳನ್ನು ತ್ರೈಮಾಸಿಕ ಆಧಾರದ ಮೇಲೆ ನಿರ್ದೇಶಕರ ಮಂಡಳಿಗೆ ವರದಿ ಮಾಡುತ್ತಾರೆ. ಮುಖ್ಯ ಕಾರ್ಯನಿರ್ವಾಹಕ ಅಕಾರಿ / ವ್ಯವಸ್ಥಾಪಕ ನಿರ್ದೇಶಕ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರ ಸಂದರ್ಭದಲ್ಲಿ, ನಮ್ಮ ಕಂಪನಿಯ ನಿರ್ದೇಶಕರ ಮಂಡಳಿಯು ಸಮರ್ಥ ಪ್ರಾಕಾರವಾಗಿರುತ್ತದೆ.

### ಪ್ರಶ್ನೆ ಮತ್ತು ಉತ್ತರಗಳು

**ನಮ್ಮ ಕಂಪನಿಯ ಗ್ರಾಹಕ ದತ್ತಾಂಶವನ್ನು ನಿರ್ವಹಿಸಲು ನೀವು ಜವಾಬ್ದಾರರಾಗಿರುತ್ತೀರಿ. ನಿಮ್ಮ ಸ್ನೇಹಿತರಲ್ಲಿ ಒಬ್ಬರು ವ್ಯಾಪಾರ ಉದ್ಯಮವನ್ನು ಪ್ರಾರಂಭಿಸುತ್ತಿದ್ದಾರೆ ಮತ್ತು ಅವರ ವ್ಯಾಪಾರದ ಮಾರ್ಕೆಟಿಂಗ್ ಉದ್ದೇಶಗಳಿಗಾಗಿ ಈ ದತ್ತಾಂಶದಿಂದ ಕೆಲವು ವಿವರಗಳನ್ನು ಹಂಚಿಕೊಳ್ಳಲು ನಿಮ್ಮನ್ನು ವಿನಂತಿಸುತ್ತಾರೆ. ಅವರು ದತ್ತಾಂಶ ಮತ್ತು ಅದರ ಮೂಲವನ್ನು ಗೌಪ್ಯವಾಗಿಡುತ್ತಾರೆ ಎಂದು ಅವರು ನಿಮಗೆ ಭರವಸೆ ನೀಡುತ್ತಾರೆ. ನೀವು ಹಾಗೆ ಮಾಡಬೇಕೇ?**

ಇಲ್ಲ. ನೀವು ಗ್ರಾಹಕ ಮಾಹಿತಿಯ ಗೌಪ್ಯತೆಯನ್ನು ಗೌರವಿಸಬೇಕು ಹಾಗೂ ಅನುಮತಿ ಇಲ್ಲದೇ ಯಾವುದೇ ವ್ಯಕ್ತಿಯೊಂದಿಗೆ ದತ್ತಾಂಶದ ಯಾವುದೇ ಭಾಗವನ್ನು ಹಂಚಿಕೊಳ್ಳುವಂತಿಲ್ಲ.

**ನಮ್ಮ ಕಂಪನಿಯ ವಿವಿಧ ವ್ಯಾಪಾರ ಘಟಕಗಳ ಆದಾಯ ಸಂಖ್ಯೆಗಳಿಗೆ ನೀವು ಪ್ರವೇಶವನ್ನು ಹೊಂದಿರುವಿರಿ. ಸಂಜೆಯ ಪಾನೀಯಗಳ ಕುರಿತು ನಿಮ್ಮೊಂದಿಗೆ ಸಂಭಾಷಣೆ ನಡೆಸುತ್ತಿರುವಾಗ, ನಿಮ್ಮ ಸ್ನೇಹಿತರು ನಮ್ಮ ಕಂಪನಿಯ ಆರ್ಥಿಕ ಕಾರ್ಯಕ್ಷಮತೆಯ ಬಗ್ಗೆ ವಿಚಾರಿಸುತ್ತಾರೆ. ನೀವು ವಿವರವಾದ ಮಾಹಿತಿಯನ್ನು ನಿಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳುವುದಿಲ್ಲ, ಆದರೆ ಅಂದಾಜು ಆದಾಯದ ಅಂಕಿಅಂಶಗಳನ್ನು ಹಂಚಿಕೊಳ್ಳಿ. ನಿಮ್ಮ ಈ ನಡವಳಿಕೆ ಸರಿಯೇ?**

ಇಲ್ಲ. ಈ ಮಾಹಿತಿಯನ್ನು ತಿಳಿದುಕೊಳ್ಳುವ ಅಗತ್ಯವಿಲ್ಲದ ಇತರರೊಂದಿಗೆ ನಮ್ಮ ಕಂಪನಿಯ ಹಣಕಾಸಿನ ಮಾಹಿತಿಯನ್ನು ಹಂಚಿಕೊಳ್ಳಲು ನಿಮಗೆ ಅನುಮತಿ ಇಲ್ಲ. ಹಣಕಾಸಿನ ಮಾಹಿತಿಯನ್ನು ಯಾವಾಗಲೂ ಸಂರಕ್ಷಿಸಬೇಕು ಮತ್ತು ಅಗತ್ಯವಿರುವ ಅನುಮೋದನೆಗಳನ್ನು ಪಡೆದ ನಂತರ ಅಗತ್ಯ–ತಿಳಿವಳಿಕೆ ಆಧಾರದ ಮೇಲೆ ಮಾತ್ರ ಬಹಿರಂಗಪಡಿಸಬೇಕು. ಸಾರ್ವಜನಿಕರೊಂದಿಗೆ ಸಾಮಾನ್ಯವಾಗಿ ಲಭ್ಯವಿಲ್ಲದ ಯಾವುದೇ ಬೆಲೆ ಸೂಕ್ಷ್ಮ ಮಾಹಿತಿಯನ್ನು ಹಂಚಿಕೊಳ್ಳುವುದು ಅನ್ವಯವಾಗುವ ಆಂತರಿಕ ವ್ಯಾಪಾರ ಕಾನೂನುಗಳ ಉಲ್ಲಂಘನೆಗೆ ಕಾರಣವಾಗಬಹುದು.

27. ಐತಿಹಾಸಿಕ ಕಾರಣಗಳಿಂದ ಅಸ್ತಿತ್ವದಲ್ಲಿರುವ ಹಿತಾಸಕ್ತಿ ಸಂಘರ್ಷದ ಅಥವಾ ಯಾವುದೇ ಇತರ ನಿದರ್ಶನದ ಹೊರತಾಗಿಯೂ, ಆಸಕ್ತ ಉದ್ಯೋಗಿಗಳಿಂದ ಸಾಕಷ್ಟು ಮತ್ತು ಸಂಪೂರ್ಣ ಬಹಿರಂಗಪಡಿಸುವಿಕೆಯನ್ನು ನಮ್ಮ ಕಂಪನಿಯ ನಿರ್ವಹಣೆಗೆ ಮಾಡಲಾಗುತ್ತದೆ. ನಮ್ಮ ಕಂಪನಿಯಲ್ಲಿ ನೇಮಕಾತಿಯ ಸಮಯದಲ್ಲಿ, ನಮ್ಮ ಉದ್ಯೋಗಿಗಳು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು ಅಂತಹ ವ್ಯಕ್ತಿಗಳು ಅಥವಾ ಅವರ ನಿಕಟ ಕುಟುಂಬ (ಪೋಷಕರು, ಒಡಹುಟ್ಟಿದವರು, ಸಂಗಾತಿಗಳು, ಪಾಲುದಾರರು ಸೇರಿದಂತೆ) ನಿಜವಾದ ಅಥವಾ ಸಂಭಾವ್ಯ ಸಂಘರ್ಷಕ್ಕೆ ಕಾರಣವಾಗುವ ಯಾವುದೇ ಆಸಕ್ತಿಯ ಸಮರ್ಥ ಪ್ರಾಧಿಕಾರಕ್ಕೆ ಸಂಪೂರ್ಣ ಬಹಿರಂಗಪಡಿಸುವಿಕೆಯನ್ನು ಮಾಡುತ್ತಾರೆ. ಮಕ್ಕಳು) ಅಥವಾ ಅವರು ನಿಕಟ ವೈಯಕ್ತಿಕ ಸಂಬಂಧಗಳನ್ನು ಆನಂದಿಸುವ ವ್ಯಕ್ತಿಗಳು, ನಮ್ಮ ಕಂಪನಿಯ ಪ್ರತಿಸ್ಪರ್ಧಿ, ಪೂರೈಕೆದಾರ, ಗ್ರಾಹಕ ಅಥವಾ ವಿತರಕ ಅಥವಾ ಇತರ ವ್ಯಾಪಾರ ವ್ಯವಹಾರಗಳನ್ನು ಹೊಂದಿರುವ ಕುಟುಂಬ ವ್ಯವಹಾರ ಅಥವಾ ಕಂಪನಿ ಅಥವಾ ಸಂಸ್ಥೆಯಲ್ಲಿ ಹೊಂದಿರಬಹುದು.

## ನೆನಪಿಡಿ...

ಹಿತಾಸಕ್ತಿಯ ಸಂಘರ್ಷವು ಉದ್ಯೋಗಿ, ಅವನ/ಅವಳ ಹತ್ತಿರದ ಕುಟುಂಬ (ಪೋಷಕರು, ಒಡಹುಟ್ಟಿದವರು, ಸಂಗಾತಿ, ಸಂಗಾತಿ ಮತ್ತು ಮಕ್ಕಳು ಸೇರಿದಂತೆ), ಸಂಬಂಧಿಕರು ಅಥವಾ ನಿಕಟ ವೈಯಕ್ತಿಕ ಸಂಬಂಧದಿಂದ ತೊಡಗಿರುವ ಯಾವುದೇ ತಿಳಿದಿರುವ ಚಟುವಟಿಕೆ, ವಹಿವಾಟು, ಸಂಬಂಧ ಅಥವಾ ಸೇವೆಯಾಗಿರಬಹುದು. ಉದ್ಯೋಗಿ ನಮ್ಮ ಕಂಪನಿಗೆ ತನ್ನ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗದಿರಬಹುದು ಅಥವಾ ಸಾಧ್ಯವಾಗದಿರಬಹುದು ಎಂಬ ಕಾಳಜಿ (ವಸ್ತುನಿಷ್ಠ ನಿರ್ಣಯದ ಆಧಾರದ ಮೇಲೆ).

## ಸಂಭಾವ್ಯ ಹಿತಾಸಕ್ತಿಗಳ ಸಂಘರ್ಷದ ಉದಾಹರಣೆಗಳು

ಹಿತಾಸಕ್ತಿಯ ಸಂಘರ್ಷ, ನಿಜವಾದ ಅಥವಾ ಸಂಭಾವ್ಯ, ನೇರವಾಗಿ ಅಥವಾ ಪರೋಕ್ಷವಾಗಿ ಉದ್ಯೋಗಿ ಅಥವಾ ಕಾರ್ಯನಿರ್ವಾಹಕ ನಿರ್ದೇಶಕ ಈ ಕೆಳಗಿನಂತೆ ತೊಡಗಿಕೊಂಡಾಗ ಉಂಟಾಗುತ್ತದೆ:

(ಎ) ವ್ಯವಹಾರ, ಚಟುವಟಿಕೆ ಅಥವಾ ಸಂಬಂಧದಲ್ಲಿ ತೊಡಗಿಸಿಕೊಂಡಿರುವ ನಮ್ಮ ಕಂಪನಿಯ ಯಾರೊಂದಿಗಾದರೂ ವಹಿವಾಟಿನಲ್ಲಿ ಪಾಲ್ಗೊಳ್ಳುವುದು;

(ಬಿ) ವೈಯಕ್ತಿಕವಾಗಿ ಅಥವಾ ಯಾವುದೇ ಕುಟುಂಬದ ಸದಸ್ಯರಿಗೆ ಅಥವಾ ಯಾರಿಗಾದರೂ ಅನುಚಿತ ಪ್ರಯೋಜನವನ್ನು ಪಡೆಯುವ ಸ್ಥಿತಿಯಲ್ಲಿದೆ ಯಾವುದೇ ಸಂಬಂತ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಥವಾ ಪ್ರಭಾವ ಬೀರುವ ಮೂಲಕ ನಿಕಟ ವೈಯಕ್ತಿಕ ವ್ಯವಹಾರ ಸಂಬಂಧದಲ್ಲಿರುವ ವ್ಯಕ್ತಿ;

(ಸಿ) ನಮ್ಮ ಕಂಪನಿಯ ಪರವಾಗಿ ವ್ಯವಹಾರವನ್ನು ನಡೆಸುತ್ತದೆ ಅಥವಾ ನಿರ್ಧಾರವನ್ನು ಪ್ರಭಾವಿಸುವ ಸ್ಥಿತಿಯಲ್ಲಿದ್ದು, ನಮ್ಮ ಕಂಪನಿಯ ವ್ಯವಹಾರಕ್ಕೆ ಸಂಬಂಸಿದಂತೆ ಪೂರೈಕೆದಾರ ಅಥವಾ ಗ್ರಾಹಕರೊಂದಿಗೆ ಸಂಬಂ ಅಥವಾ ವ್ಯಕ್ತಿಯ ಜೊತೆ ನಿಕಟ ವೈಯಕ್ತಿಕ ಸಂಬಂಧದಲ್ಲಿ, ಉದ್ಯೋಗಿ ಅಥವಾ ಕಾರ್ಯನಿರ್ವಾಹಕ ನಿರ್ದೇಶಕರು ಪ್ರಧಾನ ಅಧಿಕಾರಿ ಅಥವಾ ಪ್ರತಿನಿಧಿ, ವೈಯಕ್ತಿಕ ಲಾಭ ಅಥವಾ ಸಂಬಂಧಿಗೆ ಲಾಭವನ್ನು ಉಂಟುಮಾಡುವಂತಿದ್ದರೆ;

(ಡಿ) ಸಂಬಳ ಅಥವಾ ಇತರ ಅನುದಾನ ಹೆಚ್ಚಳ, ಪೋಸ್ಟಿಂಗ್, ಬಡ್ತಿ ಅಥವಾ ಸಂಬಂಧ ಅಥವಾ ವ್ಯಕ್ತಿಯ ನೇಮಕಾತಿಗೆ ಸಂಬಂಸಿದ ನಿರ್ಧಾರಗಳ ಮೇಲೆ ಪ್ರಭಾವ ಬೀರುವ ಸ್ಥಾನದಲ್ಲಿದ್ದರೆ, ನಮ್ಮ ಕಂಪನಿ ಅಥವಾ ನಮ್ಮ ಯಾವುದೇ ಗುಂಪು ಕಂಪನಿಗಳಲ್ಲಿ ಉದ್ಯೋಗದಲ್ಲಿರುವ ನಿಕಟ ವೈಯಕ್ತಿಕ ಸಂಬಂಧ ಹೊಂದಿದ್ದರೆ;

(ಇ) ನಮ್ಮ ಕಂಪನಿ ಅಥವಾ ನಮ್ಮ ಗುಂಪಿನ ಕಂಪನಿಗಳ ಆಸಕ್ತಿಯನ್ನು ಸೋಲಿಸುವ ಅಥವಾ ಹೊಂದಾಣಿಕೆ ಮಾಡಿಕೊಳ್ಳುವ ಚಟುವಟಿಕೆಯನ್ನು ನಡೆಸುವುದು; ಅಥವಾ

(ಎಫ್) ನಮ್ಮ ಕಂಪನಿಯ ಅಥವಾ ನಮ್ಮ ಗುಂಪಿನ ಕಂಪನಿಗಳ ಹಿತಾಸಕ್ತಿಯನ್ನು ಚಲಾಯಿಸಲು ಆಗದಿದ್ದಾಗ ಸ್ವತಂತ್ರ ತೀರ್ಪು ನೀಡುವುದು.

28. ಅಗತ್ಯವಿರುವ ಬಹಿರಂಗಪಡಿಸುವಿಕೆ ವಿಫಲವಾದರೆ ಮತ್ತು ಉದ್ಯೋಗಿ ಅಥವಾ ಕಾರ್ಯನಿರ್ವಾಹಕ ನಿರ್ದೇಶಕರು ಬಹಿರಂಗಪಡಿಸಬೇಕಾದ ಹಿತಾಸಕ್ತಿ ಸಂಘರ್ಷದ ಉದಾಹರಣೆಯ ಬಗ್ಗೆ ನಮ್ಮ ಆಡಳಿತ ಮಂಡಳಿಗೆ ತಿಳಿದಿದ್ದರೆ, ನಮ್ಮ ಆಡಳಿತ ಮಂಡಳಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುತ್ತದೆ ಮತ್ತು ಸೂಕ್ತವೆಂದು ಪರಿಗಣಿಸುತ್ತದೆ. ಉದ್ಯೋಗದ ನಿಯಮಗಳ ಪ್ರಕಾರ ಅಂತಹ ಎಲ್ಲಾ ವಿಷಯಗಳಲ್ಲಿ, ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುತ್ತದೆ. ನಾವು ಉದ್ಯೋಗಿಯ ಹಕ್ಕನ್ನು ಗೌರವಿಸುವ ಎಲ್ಲಾ ಸ್ಪಷ್ಟ ಹಾಗೂ ಪ್ರಾಮಾಣಿಕ ಶಿಸ್ತಿನ ಪ್ರಕ್ರಿಯೆಗಳನ್ನು ಅನುಸರಿಸುತ್ತೇವೆ.

## ಅನ್ವಯವಾಗುವ ಕಂಪನಿ ನಿಯಮಗಳಿಗೆ ಅನುಗುಣವಾಗಿ ಸಾಮಾನ್ಯವಾಗಿ ಅನುಮೋದಿಸಲಾಗುವ ಉದಾಹರಣೆಗಳು (ಬಹಿರಂಗಪಡಿಸಿದ ನಂತರ)

ಈ ಬೇಡಿಕೆಗಳು ನಮ್ಮ ಕಂಪನಿಯಲ್ಲಿನ ಉದ್ಯೋಗಿಯ ಪ್ರಾಥಮಿಕ ಕರ್ತವ್ಯಗಳು ಮತ್ತು ಜವಾಬ್ದಾರಿಗಳಿಂದ ತೊಂದರೆಯಾಗುವುದಿಲ್ಲ ಅಥವಾ ಗಮನವನ್ನು ಕೇಂದ್ರೀಕರಿಸುವುದಿಲ್ಲ ಮತ್ತು ಸಮಯ ಬದ್ಧತೆಗಳನ್ನು ಒದಗಿಸಿದರೆ, ಈ ಕೆಳಗಿನ ಸಂದರ್ಭಗಳಲ್ಲಿ ಜವಾಬ್ದಾರಿಯ ಸ್ಥಾನವನ್ನು (ಸಂಭಾವನೆಗಾಗಿ ಅಥವಾ ಇಲ್ಲದಿದ್ದರೆ) ಸಾಮಾನ್ಯವಾಗಿ ಅನುಮತಿಸಲಾಗುತ್ತದೆ. ಸಂಬಂತ ಸಕ್ಷಮ ಪ್ರಾಕಾರ:

(ಎ) ನಮ್ಮ ಯಾವುದೇ ಸಮೂಹ ಕಂಪನಿಗಳು, ಜಂಟಿ ಉದ್ಯಮಗಳು ಅಥವಾ ಸಹವರ್ತಿ ಕಂಪನಿಗಳ ಮಂಡಳಿಗಳಲ್ಲಿನ ನಿರ್ದೇಶಕತ್ವಗಳು.

(ಬಿ) ಶೈಕ್ಷಣಿಕ/ವೃತ್ತಿಪರ ಸಂಸ್ಥೆಗಳಲ್ಲಿ ಸದಸ್ಯತ್ವಗಳು/ಜವಾಬ್ದಾರಿಯ ಸ್ಥಾನಗಳು, ಅಂತಹ ಸಂಘವು ನಮ್ಮ ಕಂಪನಿಯ ಹಿತಾಸಕ್ತಿಗಳನ್ನು ಉತ್ತೇಜಿಸುತ್ತದೆ.

(ಸಿ) ಸದಸ್ಯತ್ವಗಳು ಅಥವಾ ಸರ್ಕಾರಿ ಸಮಿತಿಗಳು/ಸಂಸ್ಥೆಗಳು ಅಥವಾ ಸಂಸ್ಥೆಗಳಲ್ಲಿ ಭಾಗವಹಿಸುವಿಕೆ.

## ಪ್ರಶ್ನೆ ಮತ್ತು ಉತ್ತರಗಳು

**ಇತ್ತೀಚೆಗೆ ನಿಮ್ಮ ತಂಡಕ್ಕೆ ಬಂದಿರುವ ಮತ್ತು ಈಗ ನಿಮಗೆ ವರದಿ ಮಾಡುತ್ತಿರುವ ಸಹೋದ್ಯೋಗಿಯೊಂದಿಗೆ ನೀವು ಸಂಬಂಧ ಹೊಂದಿದ್ದೀರಿ. ನೀವು ಏನು ಮಾಡಬೇಕು?**

ವರದಿ ಮಾಡುತ್ತಿರುವ ಮತ್ತೊಬ್ಬ ಉದ್ಯೋಗಿಯೊಂದಿಗೆ ರೊಮ್ಯಾಂಟಿಕ್ ಅಥವಾ ಆತ್ಮೀಯ ಸಂಬಂಧವಿದ್ದು ಒಬ್ಬ ವ್ಯಕ್ತಿ ಮತ್ತೊಬ್ಬರ ಸಾಮರ್ಥ್ಯವನ್ನು ಪರಿಶೀಲಿಸುವ ಹೊಣೆಗಾರಿಕೆ ಹೊಂದಿದ್ದರೆ, ಹಿತಾಸಕ್ತಿಯ ಸಂಘರ್ಷ ಉಂಟಾಗುವ ಸಾಧ್ಯತೆ ಇರುತ್ತದೆ. ಅಂತಹ ಸನ್ನಿವೇಶದಲ್ಲಿ, ನೀವು ನಿಮ್ಮ ಮೇಲ್ವಿಚಾರಕರಿಗೆ ಸಂಭಾವ್ಯ ಸಂಘರ್ಷದ ಬಗ್ಗೆ ವರದಿ ಮಾಡಬೇಕು.

**ನಿಮ್ಮ ಕಂಪನಿಯು ನೀವು ಹಿಂದೆ ಉದ್ಯೋಗದಲ್ಲಿದ್ದ ಕಂಪನಿಗೆ ಪ್ರಸ್ತಾವನೆಯನ್ನು ಸಲ್ಲಿಸುತ್ತಿದೆ. ನಿಮ್ಮ ಹಿಂದಿನ ಉದ್ಯೋಗದಾತರಿಗೆ ಸಂಬಂಸಿದ ಗೌಪ್ಯ ಮಾಹಿತಿಯನ್ನು ನೀವು ಹೊಂದಿದ್ದೀರಿ, ಇದು ನಿಮ್ಮ ಪ್ರಸ್ತುತ ಉದ್ಯೋಗದಾತರಿಗೆ ಒಪ್ಪಂದವನ್ನು ಗೆಲ್ಲುವಲ್ಲಿ ಸಹಾಯ ಮಾಡುತ್ತದೆ ಎಂದು ನೀವು ನಂಬುತ್ತೀರಿ. ನೀವು ಈ ಮಾಹಿತಿಯನ್ನು ಹಂಚಿಕೊಳ್ಳಬೇಕೇ?**

ಇಲ್ಲ. ನೀವು ಈ ಮಾಹಿತಿಯನ್ನು ನಿಮ್ಮ ಕಂಪನಿಯೊಂದಿಗೆ ಹಂಚಿಕೊಳ್ಳುವಂತಿಲ್ಲ, ಏಕೆಂದರೆ ಇದು ಮೂರನೇ ವ್ಯಕ್ತಿಯ ಗೌಪ್ಯ ಮಾಹಿತಿಗೆ ಸಂಬಂಸಿದೆ. ನಿಮ್ಮ ಕಂಪನಿಯು ತಮ್ಮ ಹಿಂದಿನ ಉದ್ಯೋಗದಾತರಿಗೆ ಸಂಬಂಸಿದ ಗೌಪ್ಯ ಮಾಹಿತಿಯನ್ನು ರಕ್ಷಿಸಲು ತನ್ನ ಉದ್ಯೋಗಿಗಳ ಕರ್ತವ್ಯವನ್ನು ಗೌರವಿಸುತ್ತದೆ.

**ನಿಮ್ಮ ಕಂಪನಿಯ ಸಂಗ್ರಹಣೆ ವಿಭಾಗದಲ್ಲಿ ನೀವು ಖರೀದಿ ವ್ಯವಸ್ಥಾಪಕರಾಗಿದ್ದೀರಿ. ಆಕೆಯ ಅತಿಥಿಯಾಗಿ ಪ್ರೀಮಿಯರ್ ಕ್ರೀಡಾಕೂಟಕ್ಕೆ ಹಾಜರಾಗಲು ನೀವು ಪೂರೈಕೆದಾರರಿಂದ ಆಹ್ವಾನವನ್ನು ಸ್ವೀಕರಿಸುತ್ತೀರಿ. ಈ ನಿರ್ದಿಷ್ಟ ಪೂರೈಕೆದಾರರು ನಿಮ್ಮ ಕಂಪನಿಯಿಂದ ನೀಡಲಾದ ಮುಕ್ತ ಟೆಂಡರ್‌ಗೆ ಪ್ರಸ್ತಾವನೆಯನ್ನು ಸಲ್ಲಿಸಿದ ಮಾರಾಟಗಾರರಲ್ಲಿ ಒಬ್ಬರು. ನೀವು ಆಹ್ವಾನವನ್ನು ಸ್ವೀಕರಿಸಬೇಕೇ?**

ಇಲ್ಲ. ಈ ಸಂದರ್ಭದಲ್ಲಿ ನೀವು ಆಹ್ವಾನವನ್ನು ಸ್ವೀಕರಿಸಬಾರದು. ಟೆಂಡರ್ಗಾಗಿ ನೀವು ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಪಾತ್ರ ವಹಿಸುತ್ತಿರುವುದರಿಂದ, ನೀವು ಪಡೆಯುವ ಯಾವುದೇ ಅಸಾಮಾನ್ಯ ಪ್ರಯೋಜನವನ್ನು ನಿಮ್ಮ ವಸ್ತುನಿಷ್ಠತೆಗೆ ರಾಜಿ ಮಾಡಿಕೊಳ್ಳುವ ಪ್ರಚೋದನೆಯಾಗಿ ಗ್ರಹಿಸಬಹುದು.

# ನಮ್ಮ ಗ್ರಾಹಕರು




ವಿರುದ್ಧ ಹೋರಾಡಲು ಪ್ರತಿಕೂಲ ಸಮಯಗಳಿದ್ದರೂ ಸಹ ನಾವು ಸಮೃದ್ಧಿಯನ್ನು ಆನಂದಿಸುವುದನ್ನು ಮುಂದುವರೆಸಿದ್ದೇವೆ. ಸಂಬಂಸಿದ ಎಲ್ಲರೊಂದಿಗೆ ನಮ್ಮ ಬಾಂಧವ್ಯ ಅತ್ಯಂತ ಸ್ನೇಹದಿಂದ ಕೂಡಿದೆ. ನಮ್ಮ ಘಟಕಗಳು ಮತ್ತು ಗ್ರಾಹಕರೊಂದಿಗೆ ನೇರವಾಗಿ ವ್ಯವಹರಿಸುತ್ತೇವೆ. ನಮ್ಮ ಉತ್ಪಾದನೆಗಳು ಅದೇ ಉತ್ತಮ ಗುಣಮಟ್ಟವನ್ನು ಹೊಂದಿರುವುದರಿಂದ ಹೆಚ್ಚು ಪ್ರಸಿದ್ಧಿಯಾಗುತ್ತವೆ ಮತ್ತು ಹೆಚ್ಚಿನ ಬೆಲೆಯನ್ನು ಪಡೆಯುತ್ತದೆ. ಪ್ರಾಮಾಣಿಕ ಮತ್ತು ನೇರ ವ್ಯವಹಾರದ ತತ್ವಗಳು, ವಿಷಯಗಳಿಗೆ ಎಚ್ಚರಿಕೆಯ ಗಮನ, ಮತ್ತು ಅನುಕೂಲಕರ ಅವಕಾಶಗಳು ಮತ್ತು ಸಂದರ್ಭಗಳ ಲಾಭವನ್ನು ಪಡೆಯುವ ಸಾಮರ್ಥ್ಯ, ಯಶಸ್ಸಿಗೆ ಅವಕಾಶವಿದೆ ಎಂದು ಸೂಚಿಸಲು ಮಾತ್ರ ನಾನು ಈ ಸಂಗತಿಗಳನ್ನು ಉಲ್ಲೇಖಿಸುತ್ತೇನೆ.

**ಜೆಮ್ ಶೆಡ್ ಜೀ ಟಾಟಾ**

ಟಾಟಾ ಸಮೂಹದ ಸಂಸ್ಥಾಪಕರು
ಅಧ್ಯಕ್ಷರು, ಟಾಟಾ ಸನ್ಸ್ (1868 - 1904)

# ಇ. ನಮ್ಮ ಗ್ರಾಹಕರು

## ಉತ್ಪನ್ನಗಳು ಮತ್ತು ಸೇವೆಗಳು

1. ನಾವು ಅನ್ವಯವಾಗುವ ಎಲ್ಲಾ ಮಾನದಂಡಗಳನ್ನು ಸಂಸುವ ವಿಶ್ವ ದರ್ಜೆಯ ಗುಣಮಟ್ಟದ ಉತ್ಪನ್ನಗಳು ಮತ್ತು ಸೇವೆಗಳನ್ನು ಪೂರೈಸಲು ಬದ್ಧರಾಗಿದ್ದೇವೆ.

2. ನಾವು ನೀಡುವ ಉತ್ಪನ್ನಗಳು ಮತ್ತು ಸೇವೆಗಳು ಉತ್ಪನ್ನದ ಪ್ಯಾಕೇಜಿಂಗ್, ಲೇಬಲಿಂಗ್ ಮತ್ತು ಮಾರಾಟ ನಂತರದ ಸೇವೆಯ ಕಟ್ಟುಪಾಡುಗಳನ್ನು ಒಳಗೊಂಡಂತೆ ಅನ್ವಯವಾಗುವ ಕಾನೂನುಗಳಿಗೆ ಅನುಗುಣವಾಗಿರುತ್ತವೆ.

3. ನಾವು ನಮ್ಮ ಉತ್ಪನ್ನಗಳು ಮತ್ತು ಸೇವೆಗಳನ್ನು ಅವರ ಸ್ವಂತ ಅರ್ಹತೆಯ ಮೇಲೆ ಮಾರುಕಟ್ಟೆ ಮಾಡುತ್ತೇವೆ ಮತ್ತು ನಮ್ಮ ಪ್ರತಿಸ್ಪರ್ಧಿಗಳ ಉತ್ಪನ್ನಗಳು ಮತ್ತು ಸೇವೆಗಳ ಬಗ್ಗೆ ಅನ್ಯಾಯದ ಅಥವಾ ತಪ್ಪುದಾರಿಗೆಳೆಯುವ ಹೇಳಿಕೆಗಳನ್ನು ನೀಡುವುದಿಲ್ಲ.

## ರಫ್ತು ನಿಯಂತ್ರಣಗಳು ಮತ್ತು ವ್ಯಾಪಾರ ಮಂಜೂರಾತಿಗಳು

4. ನಮ್ಮ ವ್ಯವಹಾರದ ಸಂದರ್ಭದಲ್ಲಿ ನಾವು ಎಲ್ಲಾ ಸಂಬಂತ ರಫ್ತು ನಿಯಂತ್ರಣಗಳು ಅಥವಾ ವ್ಯಾಪಾರ ನಿರ್ಬಂಧಗಳನ್ನು ಅನುಸರಿಸುತ್ತೇವೆ.

## ಪ್ರಾಮಾಣಿಕ ಸ್ಪರ್ಧೆ

5. ಸ್ಪರ್ಧಾತ್ಮಕ ಮುಕ್ತ ಮಾರುಕಟ್ಟೆಗಳ ಅಭಿವೃದ್ಧಿ ಮತ್ತು ಕಾರ್ಯನಿರ್ವಹಣೆಯನ್ನು ನಾವು ಕೆಲಸ ಮಾಡುವ ಪ್ರತಿಯೊಂದು ದೇಶ ಮತ್ತು ಮಾರುಕಟ್ಟೆಯಲ್ಲಿ ವ್ಯಾಪಾರ ಮತ್ತು ಹೂಡಿಕೆಯ ಉದಾರೀಕರಣವನ್ನು ಬೆಂಬಲಿಸುತ್ತೇವೆ.

6. ಮಾರುಕಟ್ಟೆ ಪ್ರಾಬಲ್ಯದ ದುರುಪಯೋಗ, ಒಡಂಬಡಿಕೆ, ಕಾರ್ಟೆಲ್‌ಗಳಲ್ಲಿ ಭಾಗವಹಿಸುವಿಕೆ ಅಥವಾ ಸ್ಪರ್ಧಿಗಳೊಂದಿಗೆ ಅಸಮರ್ಪಕ ಮಾಹಿತಿ ವಿನಿಮಯದಂತಹ ಸ್ಪರ್ಧಾತ್ಮಕ-ವಿರೋಧಿ ನಡವಳಿಕೆಯನ್ನು ರೂಪಿಸುವ ಯಾವುದೇ ಚಟುವಟಿಕೆಯನ್ನು ನಾವು ಪ್ರವೇಶಿಸುವುದಿಲ್ಲ.

7. ನಾವು ಸಾಮಾನ್ಯ ವ್ಯವಹಾರದಲ್ಲಿ ಮಾತ್ರ ಸ್ಪರ್ಧಾತ್ಮಕ ಮಾಹಿತಿಯನ್ನು ಸಂಗ್ರಹಿಸುತ್ತೇವೆ ಮತ್ತು ಕಾನೂನುಬದ್ಧವಾಗಿ ಅನುಮತಿಸಲಾದ ಮೂಲಗಳು ಮತ್ತು ವಿಧಾನಗಳ ಮೂಲಕ ಅದನ್ನು ಪಡೆದುಕೊಳ್ಳುತ್ತೇವೆ.

## ಗ್ರಾಹಕರೊಂದಿಗೆ ವ್ಯವಹರಿಸುವುದು

8. ಗ್ರಾಹಕರೊಂದಿಗೆ ನಮ್ಮ ವ್ಯವಹಾರ ವೃತ್ತಿಪರ, ಪ್ರಾಮಾಣಿಕ ಹಾಗೂ ಪಾರದರ್ಶಕವಾಗಿರುತ್ತದೆ.

9. ನಮ್ಮ ಗ್ರಾಹಕರ ವೈಯಕ್ತಿಕ ಮಾಹಿತಿಗೆ ಸಂಬಂಸಿದಂತೆ ಗೌಪ್ಯತೆಯ ಹಕ್ಕನ್ನು ನಾವು ಗೌರವಿಸುತ್ತೇವೆ. ಅನ್ವಯವಾಗುವ ಕಾನೂನಿಗೆ ಅನುಸಾರವಾಗಿ ನಾವು ನಮ್ಮ ಗ್ರಾಹಕರ ವೈಯಕ್ತಿಕ ಮಾಹಿತಿಯನ್ನು ರಕ್ಷಿಸುತ್ತೇವೆ.

## ಪ್ರಶ್ನೆ ಮತ್ತು ಉತ್ತರಗಳು

**ನೀವು ನಮ್ಮ ಕಂಪನಿಯ ಪ್ರಾದೇಶಿಕ ಮಾರಾಟ ವ್ಯವಸ್ಥಾಪಕರು. ನೀವು ಶೀಘ್ರ ಸಂದೇಶ ಸೇವೆಯಲ್ಲಿ "ಅನೌಪಚಾರಿಕ ಗುಂಪಿನ" ಸದಸ್ಯರಾಗಿದ್ದೀರಿ, ಅವರ ಸದಸ್ಯರು ನಮ್ಮ ಕಂಪನಿಯ ಪ್ರತಿಸ್ಪರ್ಧಿಗಳ ಪ್ರಾದೇಶಿಕ ಮಾರಾಟ ಮುಖ್ಯಸ್ಥರಾಗಿದ್ದಾರೆ. ಗುಂಪಿನ ನಿರ್ವಾಹಕರು ಮಾರುಕಟ್ಟೆಯ ಪರಿಸ್ಥಿತಿಗಳನ್ನು ಅನೌಪಚಾರಿಕವಾಗಿ ಚರ್ಚಿಸಲು ಮತ್ತು ಉದ್ಯಮದ ದೃಷ್ಟಿಕೋನದಿಂದ "ಬೆಲೆ ತಂತ್ರ" ಕುರಿತು ಬುದ್ದಿಮತ್ತೆ ಮಾಡಲು ವೈಯಕ್ತಿಕ ಸಭೆಯನ್ನು ವಿನಂತಿಸಿದ್ದಾರೆ. ನೀವು ಏನು ಮಾಡಬೇಕು?**

ಪ್ರತಿಸ್ಪರ್ಧಿಗಳೊಂದಿಗೆ ಯಾವುದೇ ಸಭೆ, ವಿಶೇಷವಾಗಿ ಬೆಲೆ ತಂತ್ರ ವನ್ನು ಚರ್ಚಿಸಲು, ಸ್ಪರ್ಧಾತ್ಮಕ–ವಿರೋ ಅಭ್ಯಾಸವನ್ನು ಉತ್ತೇಜಿಸುವ ಅಥವಾ ಬೆಲೆಗಳನ್ನು ಕುಶಲತೆಯಿಂದ ಮಾಡುವ ಪ್ರಯತ್ನವಾಗಿರಬಹುದು. ಈ ಆಹ್ವಾನವನ್ನು ನಿರಾಕರಿಸುವ ಮೂಲಕ ಮತ್ತು ಅನೌಪಚಾರಿಕ ಗುಂಪಿನ ನಿರ್ಗಮಿಸುವ ಮೂಲಕ ನೀವು ಪ್ರತಿಕ್ರಿಯಿಸಬೇಕು. ನೀವು ಈ ಘಟನೆಯನ್ನು ನಿಮ್ಮ ಮೇಲ್ವಿಚಾರಕರಿಗೆ ಮತ್ತು ನಿಮ್ಮ ಕಾನೂನು ವಿಭಾಗಕ್ಕೆ ವರದಿ ಮಾಡಬೇಕು.

**ನೀವು ಸಹೋದ್ಯೋಗಿಯೊಂದಿಗೆ ಗ್ರಾಹಕರ ಸಭೆಗೆ ಹಾಜರಾಗುತ್ತಿದ್ದೀರಿ ಮತ್ತು ನಿಮ್ಮ ಸಹೋದ್ಯೋಗಿ ಕಂಪನಿಯ ಸೇವೆಗಳ ಬಗ್ಗೆ ಅಸತ್ಯವಾದ ಹೇಳಿಕೆಯನ್ನು ನೀಡುತ್ತಾರೆ. ನೀವು ಏನು ಮಾಡಬೇಕು?**

ಸಾಧ್ಯವಾದರೆ ಸಭೆಯ ಸಮಯದಲ್ಲಿ ತಪ್ಪನ್ನು ಸರಿಪಡಿಸಲು ನಿಮ್ಮ ಸಹೋದ್ಯೋಗಿಗೆ ನೀವು ಸಹಾಯ ಮಾಡಬೇಕು. ಇದು ಸಾಧ್ಯವಾಗದಿದ್ದರೆ, ಸಭೆಯ ನಂತರ ನಿಮ್ಮ ಸಹೋದ್ಯೋಗಿಯೊಂದಿಗೆ ಸಮಸ್ಯೆಯನ್ನು ಪ್ರಸ್ತಾಪಿಸಿ, ಗ್ರಾಹಕರಿಗೆ ಮಾಡಿದ ಯಾವುದೇ ತಪ್ಪು ನಿರೂಪಣೆಯನ್ನು ಸರಿಪಡಿಸಲು ಅವನು/ಅವಳನ್ನು ಅಥವಾ ಕಂಪನಿಯನ್ನು ಸಕ್ರಿಯಗೊಳಿಸಿ.

**ಗ್ರಾಹಕ ಯೋಜನೆಯಲ್ಲಿ ಕೆಲಸ ಮಾಡುವಾಗ, ನಿಮ್ಮ ಸಹೋದ್ಯೋಗಿಯಿಂದ ನೀವು ಕರೆ ಸ್ವೀಕರಿಸುತ್ತೀರಿ. ನೀವು ಅವರ ಪಾತ್ರವನ್ನು ವಹಿಸಿಕೊಳ್ಳುವ ಮೊದಲು ಅವರು ಆ ಗ್ರಾಹಕರ ಖಾತೆಯನ್ನು ನಿರ್ವಹಿಸುತ್ತಿದ್ದರು. ಹೊಸ ಆರ್ಡರ್ ಮಾಡುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವಲ್ಲಿ ಗ್ರಾಹಕರೊಂದಿಗೆ ಕೆಲಸ ಮಾಡಿರುವುದನ್ನು ಅವರು ನೆನಪಿಸಿಕೊಳ್ಳುತ್ತಾರೆ, ಅದು ಇನ್ನೊಬ್ಬ ಗ್ರಾಹಕರಿಗೆ ಪ್ರಯೋಜನಕಾರಿ ಎಂದು ಅವರು ಭಾವಿಸುತ್ತಾರೆ ಮತ್ತು ಯೋಜನೆಯ ವಿವರಗಳನ್ನು ಅವರಿಗೆ ಕಳುಹಿಸಲು ವಿನಂತಿಸುತ್ತಾರೆ. ನೀವು ಏನು ಮಾಡಬೇಕು?**

ಗ್ರಾಹಕರ ನಿರ್ದಿಷ್ಟ ಅನುಮತಿ ಇಲ್ಲದೇನೀವು ಈ ಮಾಹಿತಿಯನ್ನು ಹಂಚಿಕೊಳ್ಳಬಾರದು; ಸಾಫ್ಟ್‌ವೇರ್ ಸೇರಿದಂತೆ ಗ್ರಾಹಕರ ಸ್ವತ್ತುಗಳನ್ನು ಇನ್ನೊಬ್ಬ ಗ್ರಾಹಕನಿಗೆ ಅಥವಾ ಯಾವುದೇ ವೈಯಕ್ತಿಕ ಬಳಕೆಗಾಗಿ ಬಳಸಲು ನಿಮಗೆ ಅನುಮತಿ ಇಲ್ಲ.

## ನೆನಪಿಡಿ...

ನಮ್ಮ ಕೆಲಸದ ಗುಣಮಟ್ಟದಲ್ಲಿ ಮತ್ತು ನಮ್ಮ ಸರಕು ಹಾಗೂ ಸೇವೆಗಳ ಗುಣಮಟ್ಟದಲ್ಲಿ ಶ್ರೇಷ್ಠತೆಗಾಗಿ ಶ್ರಮಿಸುವುದು ಟಾಟಾದ ಪ್ರಮುಖ ಮೌಲ್ಯಗಳಲ್ಲಿ ಒಂದಾಗಿದೆ. ಈ ಮೌಲ್ಯದ ಸ್ಥಿರ ಅಭ್ಯಾಸವೇ ನಮ್ಮ ಬ್ರ್ಯಾಂಡ್ ಬಗ್ಗೆ ಗ್ರಾಹಕರ ನಂಬಿಕೆಯನ್ನು ನಿರ್ಮಿಸುತ್ತದೆ ಮತ್ತು ಉಳಿಸಿಕೊಳ್ಳುತ್ತದೆ.

# ನಮ್ಮ ಸಮುದಾಯಗಳು ಮತ್ತು ಪರಿಸರ



ಮುಕ್ತ ಉದ್ದಿಮೆಯಲ್ಲಿ, ಸಮುದಾಯ ಉದ್ದಿಮೆಯ ಮತ್ತೊಂದು ಶೇರುದಾರ ಮಾತ್ರವಲ್ಲದೇ, ಅದರ ಅಸ್ತಿತ್ವದ ಅತ್ಯಂತ ಮೂಲ ಉದ್ದೇಶವಾಗಿದೆ.

**ಜೆಮ್ ಶೆಡ್ ಜೀ ಟಾಟಾ**

ಟಾಟಾ ಸಮೂಹದ ಸಂಸ್ಥಾಪಕರು
ಅಧ್ಯಕ್ಷರು, ಟಾಟಾ ಸನ್ಸ್ (1868 - 1904)

# ಎಫ್. ನಮ್ಮ ಸಮುದಾಯಗಳು ಮತ್ತು ಪರಿಸರ

## ಸಮುದಾಯಗಳು

1. ನಾವು ಉತ್ತಮ ಕಾರ್ಪೋರೇಟ್ ಪೌರತ್ವಕ್ಕೆ ಬದ್ಧರಾಗಿದ್ದೇವೆ ಮತ್ತು ನಾವು ಕಾರ್ಯನಿರ್ವಹಿಸುವ ಸಮುದಾಯಗಳಲ್ಲಿನ ಜನರ ಜೀವನದ ಗುಣಮಟ್ಟವನ್ನು ಸುಧಾರಿಸುವಲ್ಲಿ ಸಕ್ರಿಯವಾಗಿ ಸಹಾಯ ಮಾಡುತ್ತೇವೆ.

2. ನಮ್ಮ ವ್ಯಾಪಾರ ಕಾರ್ಯವಿಧಾನಗಳು ಸ್ಥಳೀಯ ಸಮುದಾಯ ಮತ್ತು ಪರಿಸರದ ಮೇಲೆ ಬೀರಬಹುದಾದ ಯಾವುದೇ ಪ್ರತಿಕೂಲ ಪರಿಣಾಮವನ್ನು ಕಡಿಮೆ ಮಾಡಲು ನಾವು ಸಮುದಾಯ ಮತ್ತು ಇತರ ಮಧ್ಯವರ್ತಿಗಳೊಂದಿಗೆ ತೊಡಗಿಸಿಕೊಳ್ಳುತ್ತೇವೆ.

3. ನಾವು ಕಾರ್ಯನಿರ್ವಹಿಸುವ ಸಮುದಾಯಗಳಿಗೆ ಅನುಕೂಲವಾಗುವ ಯೋಜನೆಗಳಲ್ಲಿ ಸ್ವಯಂಸೇವಕರಾಗಿ ನಮ್ಮ ಕಾರ್ಯಪಡೆಯನ್ನು ಪ್ರೋತ್ಸಾಹಿಸುತ್ತೇವೆ, ಈ ಸಂಹಿತೆಯ ತತ್ವಗಳನ್ನು ಅಲ್ಲಿ ಅನ್ವಯಿಸುತ್ತೇವೆ ಮತ್ತು ನಿರ್ದಿಷ್ಟವಾಗಿ 'ಹಿತಾಸಕ್ತಿ ಸಂಘರ್ಷಗಳು' ಉಪವರ್ಗವನ್ನು ಅನುಸರಿಸಲಾಗುತ್ತದೆ.

## ಪರಿಸರ

4. ನಮ್ಮ ಉತ್ಪನ್ನಗಳು ಮತ್ತು ಸೇವೆಗಳ ಉತ್ಪಾದನೆ ಮತ್ತು ಮಾರಾಟದಲ್ಲಿ, ನಾವು ಪರಿಸರ ಸುಸ್ಥಿರತೆಗಾಗಿ ಶ್ರಮಿಸುತ್ತೇವೆ ಮತ್ತು ಎಲ್ಲಾ ಅನ್ವಯವಾಗುವ ಕಾನೂನುಗಳು ಮತ್ತು ನಿಬಂಧನೆಗಳನ್ನು ಅನುಸರಿಸುತ್ತೇವೆ.

5. ನಾವು ನೈಸರ್ಗಿಕ ಸಂಪನ್ಮೂಲಗಳ ವ್ಯರ್ಥ ಬಳಕೆಯನ್ನು ತಡೆಗಟ್ಟಲು ಪ್ರಯತ್ನಿಸುತ್ತೇವೆ ಮತ್ತು ಪರಿಸರವನ್ನು ಸು'ಾರಿಸಲು ಬದ್ಧರಾಗಿದ್ದೇವೆ, ವಿಶೇಷವಾಗಿ ಹಸಿರುಮನೆ ಅನಿಲಗಳ ಹೊರಸೂಸುವಿಕೆ, ನೀರು ಮತ್ತು ಶಕ್ತಿಯ ಬಳಕೆ ಮತ್ತು ತ್ಯಾಜ್ಯ ಮತ್ತು ಅಪಾಯಕಾರಿ ವಸ್ತುಗಳ ನಿರ್ವಹಣೆಗೆ ಸಂಬಂಸಿದಂತೆ. ನಮ್ಮ ಚಟುವಟಿಕೆಗಳಲ್ಲಿ ಹವಾಮಾನ ಬದಲಾವಣೆಯ ಪರಿಣಾಮವನ್ನು ಸರಿದೂಗಿಸಲು ನಾವು ಪ್ರಯತ್ನಿಸುತ್ತೇವೆ.

# ನಮ್ಮ ಮೌಲ್ಯ ಸರಣಿಯ ಪಾಲುದಾರರು



> ಇನ್ನು ಕೆಲವು ಗುಂಪುಗಳು ಮಾಡಿರುವ ಕೆಲವು ಕೆಲಸಗಳನ್ನು ನಾವು ಮಾಡಿದ್ದರೆ ಇಂದಿಗಿಂತ ದುಪ್ಪಟ್ಟು ದೊಡ್ಡವರಾಗುತ್ತಿದ್ದೆವು. ಆದರೆ ನಾವು ಮಾಡಲಿಲ್ಲ, ಮತ್ತು ನಾನು ಅದನ್ನು ಬೇರೆ ರೀತಿಯಲ್ಲಿ ಹೊಂದಿಲ್ಲ.

**ಜೆ.ಆರ್.ಡಿ ಟಾಟಾ**

ಅಧ್ಯಕ್ಷರು, ಟಾಟಾ ಸನ್ಸ್ (1938 - 1991)

(1960 ಮತ್ತು 70 ರಲ್ಲಿ ಟಾಟಾ ಸಮೂಹದ ವಿಸ್ತರಣೆಯ ಹಾದಿಯಲ್ಲಿ)

# ಜಿ. ನಮ್ಮ ಮೌಲ್ಯ ಸರಣಿಯ ಪಾಲುದಾರರು

1. ನಾವು ನಮ್ಮ ಪೂರೈಕೆದಾರರು ಮತ್ತು ಸೇವಾದಾರರನ್ನು ಪಾರದರ್ಶಕವಾಗಿ ಮತ್ತು ಪ್ರಾಮಾಣಿಕವಾಗಿ ಆಯ್ಕೆಮಾಡುತ್ತೇವೆ.

2. ನಾವು ಒಂದೇ ರೀತಿಯ ಮೌಲ್ಯಗಳನ್ನು ಹಂಚಿಕೊಳ್ಳುವ ಪೂರೈಕೆದಾರರು ಮತ್ತು ಸೇವಾ ಪೂರೈಕೆದಾರರೊಂದಿಗೆ ಕೆಲಸ ಮಾಡಲು ಬಯಸುತ್ತೇವೆ. ನಮ್ಮ ಸ್ವಂತಕ್ಕೆ ಹೋಲಿಸಬಹುದಾದ ನೈತಿಕ ಮಾನದಂಡಗಳನ್ನು ಅವರು ಅಳವಡಿಸಿಕೊಳ್ಳಬೇಕೆಂದು ನಾವು ನಿರೀಕ್ಷಿಸುತ್ತೇವೆ.

3. ನಮ್ಮ ಪೂರೈಕೆದಾರರು ಮತ್ತು ಸೇವಾ ಪೂರೈಕೆದಾರರು ನಮ್ಮ ಕಂಪನಿಯಿಂದ ಸರಿಯಾಗಿ ಅಕೃತ ಲಿಖಿತ ಅನುಮತಿಯೊಂದಿಗೆ ಮಾತ್ರ ನಮ್ಮ ಕಂಪನಿಯನ್ನು ಪ್ರತಿನಿಸುತ್ತಾರೆ. ಅವರೊಂದಿಗೆ ಹಂಚಿಕೊಳ್ಳಲಾದ ಮಾಹಿತಿಯ ಗೌಪ್ಯತೆಯನ್ನು ಗೌರವಿಸುವುದು ಸೇರಿದಂತೆ ಮತ್ತು ನಮ್ಮ ಪರವಾಗಿ ಅವರ ಸಂವಾದಗಳಲ್ಲಿ ಅವರು ಸಂಹಿತೆಗೆ ಬದ್ಧರಾಗುತ್ತಾರೆ ಎಂದು ನಿರೀಕ್ಷಿಸಲಾಗಿದೆ.

4. ನಮ್ಮ ಪೂರೈಕೆದಾರರು ಅಥವಾ ಸೇವಾ ಪೂರೈಕೆದಾರರಿಂದ ಸ್ವೀಕರಿಸಿದ ಅಥವಾ ನೀಡಿದ ಯಾವುದೇ ಉಡುಗೊರೆಗಳು ಅಥವಾ ಆತಿಥ್ಯವು ನಮ್ಮ ಕಂಪನಿಯ ಉಡುಗೊರೆಗಳು ಮತ್ತು ಆತಿಥ್ಯ ನೀತಿಯನ್ನು ಅನುಸರಿಸುತ್ತದೆ ಎಂದು ನಾವು ಖಚಿತಪಡಿಸಿಕೊಳ್ಳುತ್ತೇವೆ.

5. ಮೂರನೇ ವ್ಯಕ್ತಿಯ ಬೌದ್ಧಿಕ ಆಸ್ತಿ ಮತ್ತು ದತ್ತಾಂಶದ ಬಳಕೆಯ ಮೇಲಿನ ನಮ್ಮ ಜವಾಬ್ದಾರಿಗಳನ್ನು ನಾವು ಗೌರವಿಸುತ್ತೇವೆ.

## ಪ್ರಶ್ನೆ ಮತ್ತು ಉತ್ತರಗಳು

**ನೀವು ನಮ್ಮ ಕಂಪನಿಯಲ್ಲಿ ಸಂಗ್ರಹಣಾ ಕಾರ್ಯದ ಮುಖ್ಯಸ್ಥರಾಗಿದ್ದೀರಿ. ನೀವು ಕೆಲಸ ಮಾಡುತ್ತಿರುವ ಯೋಜನೆಗೆ ನೀವು ಕಠಿಣವಾದ ಬಜೆಟ್ ನಿರ್ಬಂಧಗಳನ್ನು ಹೊಂದಿದ್ದೀರಿ. ಉದ್ದೇಶಿತ ವೆಚ್ಚದಲ್ಲಿ ಯೋಜನೆಯನ್ನು ಪೂರ್ಣಗೊಳಿಸಲು, ಭವಿಷ್ಯದ ಆರ್ಡರ್‌ಗಳಲ್ಲಿ ನೀವು ಅವನಿಗೆ ಅದನ್ನು ಮಾಡುತ್ತೀರಿ ಎಂಬ ತಿಳುವಳಿಕೆಯ ಮೇರೆಗೆ ಈ ಯೋಜನೆಯ ಆರ್ಡರ್‌ನಲ್ಲಿ ನಿಮಗೆ ಅಸಾಧಾರಣ ರಿಯಾಯಿತಿಯನ್ನು ಒದಗಿಸಲು ನಿಮ್ಮ ಪೂರೈಕೆದಾರರನ್ನು ವಿನಂತಿಸಲು ನೀವು ಉದ್ದೇಶಿಸಿರುವಿರಿ. ನೀವು ಕೋಡ್ ಅನ್ನು ಉಲ್ಲಂಘಿಸುತ್ತೀರಾ?**

ಹೌದು, ನೀವು ಪೂರೈಕೆದಾರರಿಗೆ ಭವಿಷ್ಯದ ಪ್ರಯೋಜನಗಳನ್ನು ಒಳಗೊಂಡಂತೆ ಯಾವುದೇ ರೂಪದಲ್ಲಿ ಪ್ರಚೋದನೆಯು ವಸ್ತುನಿಷ್ಠವಾಗಿ ಮತ್ತು ಕಂಪನಿಯ ಹಿತದೃಷ್ಟಿಯಿಂದ ಕಾರ್ಯನಿರ್ವಹಿಸುವ ನಿಮ್ಮ ಸಾಮರ್ಥ್ಯವನ್ನು ರಾಜಿ ಮಾಡಿಕೊಳ್ಳಬಹುದು ಮತ್ತು ಇದನ್ನು ತಡೆಯಬೇಕು.

## ನೆನಪಿಡಿ...

ನಮ್ಮ ಮೌಲ್ಯ ಸರಣಿಯ ಪಾಲುದಾರರು ನಮ್ಮ ಪೂರೈಕೆದಾರರು ಮತ್ತು ಸೇವಾ ಪೂರೈಕೆದಾರರು, ವಿತರಕರು, ಮಾರಾಟ ಪ್ರತಿನಿಗಳು, ಗುತ್ತಿಗೆದಾರರು, ಚಾನಲ್ ಪಾಲುದಾರರು, ಸಲಹೆಗಾರರು, ಮಧ್ಯವರ್ತಿಗಳು ಮತ್ತು ಏಜೆಂಟ್‌ಗಳು; ಜಂಟಿ ಉದ್ಯಮ ಪಾಲುದಾರರು ಮತ್ತು ಇತರ ವ್ಯಾಪಾರ ಸಹವರ್ತಿಗಳನ್ನು ಒಳಗೊಂಡಿರುತ್ತದೆ.

# ನಮ್ಮ ಹಣಕಾಸಿನ ಶೇರುದಾರರು



ವ್ಯವಹಾರದಲ್ಲಿನ ನೈತಿಕ ನಡವಳಿಕೆ – ಪ್ರತಿಯೊಂದು ಕ್ಷೇತ್ರದಲ್ಲಿ ಮತ್ತು ಎಲ್ಲಾ ಘಟಕಗಳೊಂದಿಗೆ – ಟಾಟಾ ಸಮೂಹವು ಅದರ ಉದ್ಯಮಗಳನ್ನು ನಿರ್ಮಿಸಿದ ಮತ್ತು ನಿರ್ವಹಿಸುವ ತಳಹದಿಯಾಗಿದೆ. ಇದು ಪ್ರಾರಂಭದಿಂದಲೂ ಗುಂಪಿಗೆ ನಂಬಿಕೆಯ ಲೇಖನವಾಗಿದೆ, ನಮ್ಮ ಪಾಲಿಸಬೇಕಾದ ಪರಂಪರೆಯ ಮೂಲಭೂತ ಅಂಶ ಮತ್ತು ನಮ್ಮ ಜೀವನ ವಿಧಾನದ ಮೂಲತತ್ವವಾಗಿದೆ.

**ರತನ್ ಟಾಟಾ**

ಅಧ್ಯಕ್ಷರು, ಟಾಟಾ ಸನ್ಸ್ (1991 - 2012)

## ಹೆಚ್. ನಮ್ಮ ಹಣಕಾಸಿನ ಶೇರುದಾರರು

1. ಷೇರುದಾರರ ಮೌಲ್ಯವನ್ನು ಹೆಚ್ಚಿಸಲು ಮತ್ತು ಷೇರುದಾರರ ಹಕ್ಕುಗಳನ್ನು ನಿಯಂತ್ರಿಸುವ ಕಾನೂನುಗಳು ಮತ್ತು ನಿಬಂಧನೆಗಳನ್ನು ಅನುಸರಿಸಲು ನಾವು ಬದ್ಧರಾಗಿದ್ದೇವೆ.

2. ನಮ್ಮ ವ್ಯವಹಾರ ಸಂಬಂಧಿತ ಅಂಶಗಳ ಬಗ್ಗೆ ನಾವು ನಮ್ಮ ಹಣಕಾಸಿನ ಮಧ್ಯವರ್ತಿಗಳಿಗೆ ನ್ಯಾಯಯುತ, ನಿಖರ ಮತ್ತು ಸಮಯೋಚಿತ ರೀತಿಯಲ್ಲಿ ತಿಳಿಸುತ್ತೇವೆ ಮತ್ತು ಅನ್ವಯವಾಗುವ ಕಾನೂನು ಮತ್ತು ಒಪ್ಪಂದಗಳಿಗೆ ಅನುಸಾರವಾಗಿ ಅಂತಹ ಮಾಹಿತಿಯನ್ನು ಬಹಿರಂಗಪಡಿಸುತ್ತೇವೆ.

3. ನಾವು ನಮ್ಮ ಚಟುವಟಿಕೆಗಳ ನಿಖರವಾದ ದಾಖಲೆಗಳನ್ನು ಸಂಗ್ರಹಿಸುತ್ತೇವೆ ಮತ್ತು ಅನ್ವಯವಾಗುವ ಕಾನೂನು ಮತ್ತು ಉದ್ಯಮದ ಮಾನದಂಡಗಳಿಗೆ ಅನುಗುಣವಾಗಿ ಬಹಿರಂಗಪಡಿಸುವಿಕೆಯ ಮಾನದಂಡಗಳಿಗೆ ಬದ್ಧರಾಗಿರುತ್ತೇವೆ.

# ಸರ್ಕಾರಗಳು



ನಾನು ನೋಡಿದಂತೆ ವ್ಯಾಪಾರ, ನಿಮಗೆ ಒಂದು ದೊಡ್ಡ ಬೇಡಿಕೆ ನೀಡುತ್ತದೆ; ಎಲ್ಲಾ ಸಮಯದಲ್ಲೂ ನಿಮ್ಮ ಮೇಲೆ ನೈತಿಕತೆ, ಮೌಲ್ಯಗಳು, ನ್ಯಾಯಸಮ್ಮತತೆ ಮತ್ತು ವಸ್ತುನಿಷ್ಠತೆಯ ಚೌಕಟ್ಟನ್ನು ಹೇರುವ ಅಗತ್ಯವಿದೆ. ಇದನ್ನು ಮಾಡುವುದು ಸುಲಭವಲ್ಲ; ಅದನ್ನು ಸಮಗ್ರ ಭಾಗವಾಗಿಸಲು ಬಲವಂತವಾಗಿ ನಿಮ್ಮ ಮೇಲೆ ಹೇರಲು ಸಾಧ್ಯವಿಲ್ಲ.

**ರತನ್ ಟಾಟಾ**

ಅಧ್ಯಕ್ಷರು, ಟಾಟಾ ಸನ್ಸ್ (1991 - 2012)

# ಐ. ಸರ್ಕಾರಗಳು

## ರಾಜಕೀಯದ ಅಲಿಪ್ತತೆ

1. ನಾವು ಕಾರ್ಯನಿರ್ವಹಿಸುವ ದೇಶಗಳ ಸಂವಿಧಾನ ಮತ್ತು ಆಡಳಿತ ವ್ಯವಸ್ಥೆಗಳಿಗೆ ಅನುಗುಣವಾಗಿ ನಾವು ಕೆಲಸ ಮಾಡುತ್ತೇವೆ. ನಾವು ಸಾರ್ವಜನಿಕ ಚುನಾವಣೆಗಳ ಫಲಿತಾಂಶದ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುವುದಿಲ್ಲ, ಅಥವಾ ಯಾವುದೇ ಸರ್ಕಾರದ ವ್ಯವಸ್ಥೆಯನ್ನು ಹಾಳುಮಾಡಲು ಅಥವಾ ಬದಲಾಯಿಸಲು ಪ್ರಯತ್ನಿಸುವುದಿಲ್ಲ. ನಾವು ಯಾವುದೇ ನಿರ್ದಿಷ್ಟ ರಾಜಕೀಯ ಪಕ್ಷ ಅಥವಾ ರಾಜಕೀಯ ಹುದ್ದೆಗೆ ಅಭ್ಯರ್ಥಿಯನ್ನು ಬೆಂಬಲಿಸುವುದಿಲ್ಲ. ನಮ್ಮ ನಡವಳಿಕೆಯು ಯಾವುದೇ ರಾಜಕೀಯ ಸಂಸ್ಥೆ ಅಥವಾ ವ್ಯಕ್ತಿಯೊಂದಿಗೆ ಪರಸ್ಪರ ಅವಲಂಬನೆ/ಒಲವು ಎಂದು ಅರ್ಥೈಸಬಹುದಾದ ಯಾವುದೇ ಚಟುವಟಿಕೆಯನ್ನು ಹೊರಗಿಡಬೇಕು ಮತ್ತು ನಾವು ಯಾವುದೇ ನಿರ್ದಿಷ್ಟ ರಾಜಕೀಯ ಪಕ್ಷ, ಅಭ್ಯರ್ಥಿ ಅಥವಾ ಪ್ರಚಾರಕ್ಕೆ ಯಾವುದೇ ಕಂಪನಿಯ ನಿಗಳು ಅಥವಾ ಆಸ್ತಿ ಅಥವಾ ಇತರ ಸಂಪನ್ಮೂಲಗಳನ್ನು ದೇಣಿಗೆಯಾಗಿ ನೀಡುವುದಿಲ್ಲ ಅಥವಾ ನೀಡುವುದಿಲ್ಲ.

   ಶುದ್ಧ ಚುನಾವಣಾ ಪ್ರಕ್ರಿಯೆಯ ಮೂಲಕ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಲಪಡಿಸುವ ಸಲುವಾಗಿ ನಮ್ಮ ನಿರ್ದೇಶಕರ ಮಂಡಳಿಯು ಪರಿಗಣಿಸುವ ಯಾವುದೇ ಹಣಕಾಸಿನ ಕೊಡುಗೆಗಳನ್ನು ಭಾರತದಲ್ಲಿನ ಪ್ರಗತಿಶೀಲ ಚುನಾವಣಾ ಟ್ರಸ್ಟ್ ಮೂಲಕ ಅಥವಾ ಭಾರತದ ಹೊರಗೆ ಇದೇ ರೀತಿಯ ಪಾರದರ್ಶಕ, ಸರಿಯಾಗಿ ಅಕೃತ, ತಾರತಮ್ಯವಿಲ್ಲದ ಮತ್ತು ವಿವೇಚನೆಯಿಲ್ಲದ ವಾಹನದ ಮೂಲಕ ಮಾತ್ರ ವಿಸ್ತರಿಸಲಾಗುತ್ತದೆ.

## ಸರ್ಕಾರದ ತೊಡಗುವಿಕೆ

2. ಉತ್ತಮ ಆಡಳಿತವನ್ನು ಪ್ರೋತ್ಸಾಹಿಸಲು ನಾವು ಸರ್ಕಾರ ಮತ್ತು ನಿಯಂತ್ರಕರೊಂದಿಗೆ ರಚನಾತ್ಮಕ ರೀತಿಯಲ್ಲಿ ತೊಡಗಿಸಿಕೊಳ್ಳುತ್ತೇವೆ. ನಾವು ಅವರೊಂದಿಗೆ ನಮ್ಮ ಸಂವಾದಗಳನ್ನು ನಮ್ಮ ಸಂಹಿತೆಗೆ ಅನುಗುಣವಾಗಿ ನಡೆಸುತ್ತೇವೆ.

3. ನಾವು ಯಾವುದೇ ಸರ್ಕಾರಿ ಪರಿಶೀಲನೆ ಅಥವಾ ತನಿಖೆಗಾಗಿ ದತ್ತಾಂಶ ಅಥವಾ ದಾಖಲೆಗಳ ಸಮಗ್ರತೆ ಅಥವಾ ಲಭ್ಯತೆಯ ತೀರ್ಮಾನಗಳಿಗೆ ಅಡ್ಡಿಪಡಿಸುವುದಿಲ್ಲ, ತಡೆಯುವುದಿಲ್ಲ ಅಥವಾ ಅನುಚಿತವಾಗಿ ಪ್ರಭಾವ ಬೀರುವುದಿಲ್ಲ.

# ನಮ್ಮ ಸಮೂಹ ಕಂಪನಿಗಳು



> ಕೈಗಾರಿಕಾ ದಾರ್ಶನಿಕರಾಗಿ ಯಾರೂ ಜೆಮ್ ಶೆಡ್ ಜೀಗೆ ಸರಿಸಮಾನರಾಗಿದ್ದರು ಎಂದು ನಾನು ಭಾವಿಸುವುದಿಲ್ಲ. ಆದರೆ ನಾನು ಜೆಮ್ ಶೆಡ್ ಜೀಯ ಅಭಿಮಾನಿಯಾಗಲು ಅದೊಂದೇ ಕಾರಣವಲ್ಲ. ಈ ಸಮೂಹಕ್ಕೆ ಅಳವಡಿಸಿದ ಅವರ ಮೌಲ್ಯಗಳ ಪ್ರಜ್ಞೆ, ಅತ್ಯುತ್ತಮ ಮೌಲ್ಯಗಳು ಪ್ರಮುಖ ಕಾರಣವಾಗಿದೆ. ಟಾಟಾ ಕಂಪನಿಗಳನ್ನು ಒಟ್ಟಿಗೆ ಹಿಡಿದಿಟ್ಟುಕೊಳ್ಳುವುದು ಯಾವುದು ಎಂದು ಯಾರಾದರೂ ನನ್ನನ್ನು ಕೇಳಿದರೆ, ಎಲ್ಲಕ್ಕಿಂತ ಹೆಚ್ಚಾಗಿ, ಜೆಮ್ ಶೆಡ್ ಜೀ ಟಾಟಾ ಅವರಿಂದ ನಾವು ಪಡೆದ ನಮ್ಮ ಹಂಚಿಕೆಯ ಆದರ್ಶಗಳು ಮತ್ತು ಮೌಲ್ಯಗಳು ಎಂದು ನಾನು ಹೇಳುತ್ತೇನೆ.

**ಜೆ.ಆರ್.ಡಿ ಟಾಟಾ**

ಅಧ್ಯಕ್ಷರು, ಟಾಟಾ ಸನ್ಸ್ (1938 - 1991)

## ಜೆ. ನಮ್ಮ ಸಮೂಹ ಕಂಪನಿಗಳು

1. ಜ್ಞಾನ, ಭೌತಿಕ ಸಂಪನ್ಮೂಲಗಳು, ಮಾನವ ಮತ್ತು ನಿರ್ವಹಣಾ ಸಂಪನ್ಮೂಲಗಳನ್ನು ಹಂಚಿಕೊಳ್ಳುವ ಮೂಲಕ ಹಾಗೂ ಅನ್ವಯಿಸುವ ಕಾನೂನಿಗೆ ಅನುಗುಣವಾಗಿ ಪ್ರಮುಖ ಆಡಳಿತ ನೀತಿಗಳು ಮತ್ತು ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ಮೂಲಕ ಜಂಟಿ ಉದ್ಯಮಗಳು ಸೇರಿದಂತೆ ನಮ್ಮ ಗುಂಪಿನ ಕಂಪನಿಗಳೊಂದಿಗೆ ಸಹಕರಿಸಲು ನಾವು ಪ್ರಯತ್ನಿಸುತ್ತೇವೆ.

2. ನಮ್ಮ ಮತ್ತು ನಮ್ಮ ಯಾವುದೇ ಸಮೂಹ ಕಂಪನಿಗಳ ನಡುವಿನ ಯಾವುದೇ ವಿವಾದವನ್ನು ಸೂಕ್ತವಾದ ವಿವಾದ ಪರಿಹಾರ ಕಾರ್ಯವಿಧಾನದ ಮೂಲಕ ನಾವು ಸೌಹಾರ್ದಯುತ ಪರಿಹಾರವನ್ನು ಸಾಸಲು ಪ್ರಯತ್ನಿಸುತ್ತೇವೆ ಇದರಿಂದ ಅದು ನಮ್ಮ ವ್ಯಾಪಾರ ಆಸಕ್ತಿಗಳು ಮತ್ತು ಮುಖ್ಯಸ್ಥಗಾರರ ಮೌಲ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವುದಿಲ್ಲ.

3. ಯಾವುದೇ ಮೂರನೇ ವ್ಯಕ್ತಿ ಅಥವಾ ಜಂಟಿ ಉದ್ಯಮವು ಸರಿಯಾದ ಅನುಮತಿಯಿಲ್ಲದೆ ತನ್ನ ಆಸಕ್ತಿಗಳನ್ನು ಹೆಚ್ಚಿಸಲು ಟಾಟಾದ ಹೆಸರು/ಬ್ರ್ಯಾಂಡ್ ಅನ್ನು ಬಳಸುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲು ನಾವು ಪ್ರಕ್ರಿಯೆಗಳನ್ನು ಹೊಂದಿದ್ದೇವೆ.

4. ನಮ್ಮ ನಿರ್ದೇಶಕ ಮಂಡಳಿಯು ನಿಯಮಿತವಾಗಿ ಟಾಟಾ ಸನ್ಸ್‌ನಿಂದ ರೂಪಿಸಲಾದ ಮತ್ತು ಸಮೂಹ ಕಂಪನಿಗಳಿಗೆ ವಿತರಿಸಲಾದ ಅಳವಡಿಕೆ ನೀತಿಗಳು ಮತ್ತು ಮಾರ್ಗಸೂಚಿಗಳನ್ನು ಪರಿಗಣಿಸುತ್ತದೆ.

### ಪ್ರಶ್ನೆ ಮತ್ತು ಉತ್ತರಗಳು

**ನೀವು ನಮ್ಮ ಕಂಪನಿಯಲ್ಲಿ ಐಟಿ ಯೋಜನೆಗಾಗಿ ಸಂಭಾವ್ಯ ಮಾರಾಟಗಾರರನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿದ್ದೀರಿ. ಎರಡು ಕಂಪನಿಗಳ ಅಂತಿಮ ಪಟ್ಟಿಯಲ್ಲಿ, ಒಂದು ಸೀಮಿತ ಉಲ್ಲೇಖಗಳು ಮತ್ತು ಕಡಿಮೆ ಬೆಲೆ-ಉದ್ಧರಣದೊಂದಿಗೆ ಹೊಸ ಸ್ಟಾರ್ಟ್‌ಅಪ್ ಆಗಿದ್ದರೆ, ಇನ್ನೊಂದು ಮೂವತ್ತು ವರ್ಷಗಳ ಅನುಷ್ಠಾನದ ಅನುಭವ ಮತ್ತು ಉತ್ತಮ ಉಲ್ಲೇಖಗಳನ್ನು ಹೊಂದಿರುವ ಟಾಟಾ ಕಂಪನಿಯಾಗಿದೆ, ಆದರೆ ಅದಕ್ಕೆ ಸ್ವಲ್ಪ ಹೆಚ್ಚಿನ ಅವಲೋಕನದ ಕೆಲಸ. ಆಯ್ಕೆಯ ಎಲ್ಲಾ ಇತರ ಪ್ಯಾರಾಮೀಟರ್‌ಗಳು ಬಹುತೇಕ ಸಮಾನವಾಗಿರುವುದರಿಂದ, ನೀವು ಯಾವ ಕಂಪನಿಯನ್ನು ಕೆಲಸಕ್ಕೆ ಆಯ್ಕೆ ಮಾಡಬೇಕು?**

ಬೆಲೆಯು ನಿಸ್ಸಂದೇಹವಾಗಿ ನಿರ್ಧಾರ ತೆಗೆದುಕೊಳ್ಳುವ ಪ್ರಮುಖ ಮಾನದಂಡವಾಗಿದ್ದರೂ, ಮೌಲ್ಯಮಾಪನ ಮಾಡುವುದು ಸ್ಪಷ್ಟವಾಗಿಲ್ಲ. ನಿಮ್ಮ ಐಟಿ ಪಾಲುದಾರರನ್ನು ನಿರ್ಧರಿಸಲು ಉತ್ತಮ ಗ್ರಾಹಕ ಉಲ್ಲೇಖಗಳು, ಸಾಬೀತಾದ ಟ್ರ್ಯಾಕ್ ರೆಕಾರ್ಡ್ ಮತ್ತು ಹಂಚಿಕೆಯ ಮೌಲ್ಯ ವ್ಯವಸ್ಥೆಗಳನ್ನು ಸಹ ನೀವು ಪರಿಗಣಿಸಬೇಕಾಗಬಹುದು.

**ನೀವು ಯೋಜನೆಗಾಗಿ ಸಂಭಾವ್ಯ ಮಾರಾಟಗಾರರನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿದ್ದೀರಿ. ಮೂರು ಅಂತಿಮ ಅಭ್ಯರ್ಥಿಗಳಲ್ಲಿ ಒಂದು ಸಮೂಹ ಕಂಪನಿಯಾಗಿದೆ. ಅಂತಿಮ ಪ್ರಸ್ತಾವನೆಗಳನ್ನು ಪರಿಶೀಲಿಸುವಾಗ, ಬೆಲೆ ಮತ್ತು ಮಾಲೀಕತ್ವದ ಒಟ್ಟು ವೆಚ್ಚದ ಆಧಾರದ ಮೇಲೆ ನೀವು ಮೂರು ಪ್ರಸ್ತಾವನೆಗಳಲ್ಲಿ ಸಮೂಹ ಕಂಪನಿಯನ್ನು ಎರಡನೇ ಸ್ಥಾನದಲ್ಲಿರುತ್ತೀರಿ ಮತ್ತು ಮೊದಲ ಶ್ರೇಣಿಯ ಮಾರಾಟಗಾರರನ್ನು ಆಯ್ಕೆ ಮಾಡುತ್ತೀರಿ. ಇದು ಸರಿಯಾದ ನಿರ್ಧಾರವೇ?**

ಹೌದು. ನೀವು ಮಾರಾಟಗಾರರನ್ನು ಆಯ್ಕೆ ಮಾಡಬೇಕು, ಅದರ ಸ್ವಂತ ಅರ್ಹತೆಯ ಮೇಲೆ, ನಿಮ್ಮ ಕಂಪನಿಯ ಅವಶ್ಯಕತೆಗಳಿಗೆ ಹೆಚ್ಚು ಸೂಕ್ತವಾದ ಮಾರಾಟಗಾರರನ್ನು ಆಯ್ಕೆಮಾಡಬೇಕು. ನೀವು ಸಮೂಹ ಕಂಪನಿಯನ್ನು ಅದರ ಸಂಬಂಧದಿಂದಾಗಿ ಮಾತ್ರ ಆಯ್ಕೆ ಮಾಡಬಾರದು.

# ಹೆಚ್ಚುತ್ತಿರುವ ಕಾಳಜಿಗಳು

ನಮ್ಮ ಉದ್ಯೋಗಿಗಳು, ಗ್ರಾಹಕರು, ಪೂರೈಕೆದಾರರು ಮತ್ತು ಇತರ ಮಧ್ಯವರ್ತಿಗಳು ನಮ್ಮ ಸಂಹಿತೆ, ನೀತಿಗಳು ಅಥವಾ ಕಾನೂನಿನ ಯಾವುದೇ ನಿಜವಾದ ಅಥವಾ ಸಂಭಾವ್ಯ ಉಲ್ಲಂಘನೆಯ ಬಗ್ಗೆ ತಿಳಿದಾಗ ಕಳವಳಗಳನ್ನು ವ್ಯಕ್ತಪಡಿಸಲು ಅಥವಾ ಬಹಿರಂಗಪಡಿಸಲು ನಾವು ಪ್ರೋತ್ಸಾಹಿಸುತ್ತೇವೆ. ನಮ್ಮ ಮೌಲ್ಯಗಳು ಮತ್ತು ತತ್ವಗಳನ್ನು ಪ್ರತಿಬಿಂಬಿಸದ ಯಾವುದೇ ಘಟನೆಯ (ವಾಸ್ತವ ಅಥವಾ ಸಂಭಾವ್ಯ) ದುಷ್ಕೃತ್ಯದ ವರದಿಯನ್ನು ನಾವು ಪ್ರೋತ್ಸಾಹಿಸುತ್ತೇವೆ.

ಕಾಳಜಿ ಅಥವಾ ಪ್ರಶ್ನೆಗಳನ್ನು ಅಥವಾ ಪ್ರಕರಣಗಳನ್ನು ವರದಿ ಮಾಡಲು ಲಭ್ಯವಿರುವ ಮಾರ್ಗಗಳು ಒಳಗೊಂಡಿರಬಹುದು:

- ತಕ್ಷಣದ ಲೈನ್ ಮ್ಯಾನೇಜರ್ ಅಥವಾ ನಮ್ಮ ಕಂಪನಿಯ ಮಾನವ ಸಂಪನ್ಮೂಲ ಇಲಾಖೆ
- ನಮ್ಮ ಕಂಪನಿಯ ನಿಯೋಜಿಸಲ್ಪಟ್ಟ ನೈತಿಕ ಅಧಿಕಾರಿಗಳು
- ಮೂರನೆಯ ವ್ಯಕ್ತಿಯ ನೈತಿಕ ಸಹಾಯವಾಣಿಗೆ 'ಗೌಪ್ಯವಾಗಿ ವರದಿ ಮಾಡುವುದು' (ಲಭ್ಯವಿದ್ದರೆ)
- ನಮ್ಮ ಕಂಪನಿಯ 'ಬಾತ್ಮಿದಾರ' ನಿಯಮದಲ್ಲಿ ನೀಡಲಾದ ಇತರ ಯಾವುದೇ ವರದಿಯ ವಾಹಕಗಳು

ಕಾನೂನುಬದ್ಧ ಕಾಳಜಿಯನ್ನು ವರದಿ ಮಾಡುವ ಯಾರ ವಿರುದ್ಧವೂ ಪ್ರತೀಕಾರದ ಯಾವುದೇ ರೂಪವನ್ನು ನಾವು ಸಹಿಸುವುದಿಲ್ಲ. ಅಂತಹ ವ್ಯಕ್ತಿಯನ್ನು ಗುರಿಯಾಗಿಸುವಲ್ಲಿ ತೊಡಗಿರುವ ಯಾರಾದರೂ ಶಿಸ್ತು ಕ್ರಮಕ್ಕೆ ಒಳಪಡುತ್ತಾರೆ.

ನೀವು ಅಥವಾ ನಿಮಗೆ ತಿಳಿದಿರುವ ಯಾರಾದರೂ ಪ್ರಶ್ನೆಯನ್ನು ಎತ್ತಿದ್ದಕ್ಕಾಗಿ ಅಥವಾ ಪ್ರಕರಣವನ್ನು ವರದಿ ಮಾಡಿದ್ದಕ್ಕಾಗಿ ಪ್ರತೀಕಾರಕ್ಕೆ ಒಳಗಾಗಿದ್ದೀರಿ ಎಂದು ನೀವು ಅನುಮಾನಿಸಿದರೆ, ನಿಮ್ಮ ಲೈನ್ ಮ್ಯಾನೇಜರ್, ಕಂಪನಿಯ ನೈತಿಕ ಸಮಾಲೋಚಕರು, ಮಾನವ ಸಂಪನ್ಮೂಲ ಇಲಾಖೆ, ಎಂಡಿ/ಸಿಇಓ ಅಥವಾ ಸಮೂಹದ ಮುಖ್ಯ ನೈತಿಕ ಅಧಿಕಾರಿಯ ಕಚೇರಿಗೆ ಪ್ರಾಮಾಣಿಕವಾಗಿ ವರದಿ ಮಾಡಿ.

## ಪ್ರಶ್ನೆ ಮತ್ತು ಉತ್ತರಗಳು

**ನನ್ನ ಮೇಲ್ವಿಚಾರಕರು ನನಗ್ಕಾನೂನುಬಾಹಿರವಾಗಿದೆ ಎಂದು ನಾನು ಭಾವಿಸಿದ ಯಾವುದೇ ಕೆಲಸವನ್ನು ಮಾಡಲು ಕೇಳಿದ್ದಾರೆ. ನಾನು ಹೇಳಿದ್ದನ್ನು ಮಾಡದಿದ್ದರೆ, ನಾನು ನನ್ನ ಕೆಲಸವನ್ನು ಕಳೆದುಕೊಳ್ಳುತ್ತೇನೆ ಎಂದು ನಾನು ಹೆದರುತ್ತೇನೆ. ನಾನು ಅದನ್ನು ಮಾಡಬೇಕೇ?**

ಇಲ್ಲ. ಕಾನೂನನ್ನು ಉಲ್ಲಂಘಿಸುವುದು ಎಂದಿಗೂ ಒಂದು ಆಯ್ಕೆಯಲ್ಲ. ನೀವು ಇಬ್ಬರೂ ವಾಸ್ತವವನ್ನು ಅರ್ಥಮಾಡಿಕೊಂಡಿದ್ದೀರಿ ಎಂದು ಖಚಿತಪಡಿಸಿಕೊಳ್ಳಲು ನಿಮ್ಮ ಮೇಲ್ವಿಚಾರಕರೊಂದಿಗೆ ಪರಿಸ್ಥಿತಿಯನ್ನು ಚರ್ಚಿಸಿ. ನಿಮ್ಮ ಕಾಳಜಿಗಳನ್ನು ಪರಿಹರಿಸಲಾಗದಿದ್ದರೆ, ಉನ್ನತ ಮಟ್ಟದ ಮೇಲ್ವಿಚಾರಕರು, ನೈತಿಕ ಸಲಹೆಗಾರರು, ಕಾನೂನು ವಿಭಾಗವನ್ನು ಸಂಪರ್ಕಿಸಿ ಅಥವಾ ಲಭ್ಯವಿದ್ದಲ್ಲಿ ಕಂಪನಿಯ ಗೌಪ್ಯ ವರದಿ ವ್ಯವಸ್ಥೆಯ ಮೂಲಕ ಅವರನ್ನು ವರದಿ ಮಾಡಿ.

**ನೈತಿಕ ಸಮಾಲೋಚಕರಿಗೆ ಕಾಳಜಿಯ ಕುರಿತು ವರದಿ ಮಾಡಿದ್ದಕ್ಕಾಗಿ ನನ್ನ ಮೇಲ್ವಿಚಾರಕರು ನನ್ನನ್ನು ಅನ್ಯಾಯವಾಗಿ ನಡೆಸಿಕೊಳ್ಳುತ್ತಿದ್ದಾರೆ ಎಂದು ನಾನು ಭಾವಿಸುತ್ತೇನೆ. ನಾನು ಏನು ಮಾಡಬಹುದು?**

ಕಾಳಜಿ ವ್ಯಕ್ತಪಡಿಸುವವರ ವಿರುದ್ಧ ಪ್ರತೀಕಾರವು ಸಂಹಿತೆಯ ಉಲ್ಲಂಘನೆಯಾಗಿದೆ. ಆದ್ದರಿಂದ ನೀವು ನಿಮ್ಮ ಮೇಲ್ವಿಚಾರಕರ ಈ ಕ್ರಮವನ್ನು ನೈತಿಕ ಸಮಾಲೋಚಕರು ಅಥವಾ ನಿಮ್ಮ ಕಂಪನಿಯ ಎಂಡಿ/ಸಿಇಓ ಗೆ ಅಥವಾ ಲಭ್ಯವಿದ್ದಲ್ಲಿ ಕಂಪನಿಯ ಗೌಪ್ಯ ವರದಿ ಮಾಡುವ ವ್ಯವಸ್ಥೆಯ ಮೂಲಕ ತ್ವರಿತವಾಗಿ ವರದಿ ಮಾಡಬೇಕು.

## ಹೊಣೆಗಾರಿಕೆ

ಈ ಸಂಹಿತೆ ಕೇವಲ ಔಪಚಾರಿಕ ಅನುಸರಣೆಯ ಉದ್ದೇಶಕ್ಕಾಗಿ ನೀಡಲಾದ ಶಿಫಾರಸು ಮಾಡಿದ ಮಾರ್ಗಸೂಚಿಗಳ ಗುಂಪಿಗಿಂತ ಹೆಚ್ಚು. ಇದು ನಮ್ಮ ಮೌಲ್ಯ ವ್ಯವಸ್ಥೆಗೆ ಮತ್ತು ನಮ್ಮ ಮೂಲ ತತ್ವಗಳಿಗೆ ನಮ್ಮ ಸಾಮೂಹಿಕ ಬದ್ಧತೆಯನ್ನು ಪ್ರತಿನಿಸುತ್ತದೆ.

ನಮ್ಮಿಂದ ನೇರವಾಗಿ ಅಥವಾ ಪರೋಕ್ಷವಾಗಿ ಉದ್ಯೋಗದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ಅವನ/ಅವಳ ವರ್ತನೆಗೆ ಜವಾಬ್ದಾರನಾಗಿರಬೇಕೆಂದು ನಿರೀಕ್ಷಿಸುತ್ತೇವೆ. ಅಂತಹ ನಡವಳಿಕೆಯು ಈ ಸಂಹಿತೆಯನ್ನು ಉಲ್ಲಂಘಿಸಿದರೆ, ಅವರು ತಮ್ಮ ಉದ್ಯೋಗದ ನಿಯಮಗಳು ಮತ್ತು ಸಂಬಂಧಿತ ಕಂಪನಿ ನೀತಿಗಳ ಪ್ರಕಾರ ಕ್ರಮಕ್ಕೆ ಒಳಗಾಗಬೇಕಾಗುತ್ತದೆ.

ಪತ್ರದಲ್ಲಿ ಮತ್ತು ಸ್ಪೂರ್ತಿ ಪಡೆದು ಅನುಸರಿಸಿದರೆ, ಈ ಸಂಹಿತೆಯನ್ನು ನಮ್ಮ ಉದ್ಯೋಗಿಗಳು ಮತ್ತು ನಮ್ಮೊಂದಿಗೆ ಕೆಲಸ ಮಾಡುವವರು 'ಬದುಕುತ್ತಾರೆ'. ಇದು ನಮ್ಮ ಎಲ್ಲಾ ಪಾಲುದಾರರಿಗೆ ನಮ್ಮ ಹಂಚಿಕೆಯ ಜವಾಬ್ದಾರಿಯನ್ನು ಪ್ರತಿನಿಸುತ್ತದೆ ಹಾಗೂ ಪರಸ್ಪರ ಬದ್ಧತೆಯನ್ನು ಪ್ರತಿನಿಸುತ್ತದೆ.

### ಮಾತನಾಡಿ...

ನೀವು ತೆಗೆದುಕೊಳ್ಳಲಿರುವ ನಿರ್ದಿಷ್ಟ ಕ್ರಮವು ಸಂಹಿತೆಯಲ್ಲಿ ಸೂಚಿಸಲಾದ ತತ್ವಗಳಿಗೆ ಅನುಗುಣವಾಗಿದೆಯೇ ಎಂದು ನಿಮಗೆ ಖಚಿತವಿಲ್ಲದಿದ್ದರೆ, ನಿಮ್ಮನ್ನು ಕೇಳಿಕೊಳ್ಳಿ:

- ಇದು ನೇರವಾಗಿ ಅಥವಾ ಪರೋಕ್ಷವಾಗಿ ಯಾರಿಗಾದರೂ ಅಪಾಯವನ್ನುಂಟುಮಾಡಬಹುದೇ ಅಥವಾ ಅವರಿಗೆ ಹಾನಿ ಉಂಟುಮಾಡಬಹುದೇ?
- ಇದು ಕಾನೂನುಬಾಹಿರ/ಅನ್ಯಾಯವೇ ಅಥವಾ ನಮ್ಮ ನೀತಿಗಳು ಮತ್ತು ಕಾರ್ಯವಿಧಾನಗಳಿಗೆ ಅನುಗುಣವಾಗಿಲ್ಲವೇ?
- ನನ್ನ ಆತ್ಮಸಾಕ್ಷಿಯು ಅದನ್ನು ತಿರಸ್ಕರಿಸುತ್ತದೆಯೇ? ಇದು ನನ್ನ ವೈಯಕ್ತಿಕ ಮೌಲ್ಯಗಳಿಗೆ ವಿರುದ್ಧವಾಗಿದೆಯೇ?
- ಈ ವಿಷಯ ಮಾಧ್ಯಮಗಳಲ್ಲಿ ಕಾಣಿಸಿಕೊಂಡರೆ ನನಗೆ ಅನಾನುಕೂಲವಾಗುತ್ತದೆಯೇ? ಇದು ನನ್ನ ಕಂಪನಿಗೆ, ಪತಿ/ಪತ್ನಿ, ಪೋಷಕರು ಅಥವಾ ಮಗುವಿಗೆ ಮುಜುಗರ ಉಂಟುಮಾಡುತ್ತದೆಯೇ?
- ಇದು 'ತಪ್ಪು' ಅನಿಸುತ್ತದೆಯೇ?

ಈ ಯಾವುದೇ ಪ್ರಶ್ನೆಗಳಿಗೆ ಉತ್ತರ ಹೌದು ಆಗಿದ್ದರೆ, ದಯವಿಟ್ಟು ನಿಲ್ಲಿಸಿ ಮತ್ತು ನೀವು ವರದಿ ಮಾಡಿಕೊಳ್ಳುವ ಮ್ಯಾನೇಜರ್, ನೈತಿಕ ಸಲಹೆಗಾರರು, ಮಾನವ ಸಂಪನ್ಮೂಲ ಇಲಾಖೆ, ಕಾನೂನು ಇಲಾಖೆ ಅಥವಾ ಹಿರಿಯ ನಿರ್ವಹಣಾ ತಂಡದ ಯಾವುದೇ ಸದಸ್ಯರನ್ನು ನಿರ್ಧಾರ ಮಾಡುವಲ್ಲಿ ನಿಮಗೆ ಸಹಾಯ ಮಾಡಲು ಸಂಪರ್ಕಿಸಿ.

**ಗೊಂದಲವನ್ನು ಎದುರಿಸಿದರೆ;** ನಿಲ್ಲಿಸಿ, ಆಲೋಚಿಸಿ, ಜವಾಬ್ದಾರಿಯುತವಾಗಿ ವರ್ತಿಸಿ.

# ಟಿಪ್ಪಣಿ

ಕಂಪನಿಯ ದೃಷ್ಟಿಕೋನದ ಅಥವಾ ಮಧ್ಯವರ್ತಿಗಳ ದೃಷ್ಟಿಕೋನದ ಕಟ್ಟುಪಾಡುಗಳಿಂದ ಎಲ್ಲಾ ನಿರೀಕ್ಷೆಗಳ ಸಮಗ್ರ ಮತ್ತು ಸಂಪೂರ್ಣ ವಿವರಣೆಯನ್ನು ಸಂಹಿತೆ ನೀಡುವುದಿಲ್ಲ.

ಅನ್ವಯವಾಗುವ ಎಲ್ಲಾ ಕಾನೂನು, ಗುಂಪು–ಹಂತದ ಸಲಹೆಗಳು ಮತ್ತು ನಿಯಮಗಳು, ಕಂಪನಿ–ಮಟ್ಟದ ನೀತಿಗಳು, ಕಾರ್ಯವಿಧಾನಗಳು ಮತ್ತು ಕೆಲಸದ ನಿಯಮಗಳೊಂದಿಗೆ ತಮ್ಮನ್ನು ತಾವು ಪರಿಚಿತರಾಗಲು ನಮ್ಮ ಉದ್ಯೋಗಿಗಳು ನಿರಂತರ ಬಾಧ್ಯತೆಯನ್ನು ಹೊಂದಿದ್ದಾರೆ. ಸಂಹಿತೆಯ ವ್ಯಾಖ್ಯಾನದ ಕುರಿತು ಯಾವುದೇ ಮಾರ್ಗದರ್ಶನಕ್ಕಾಗಿ, ನಾವು ನಮ್ಮ ಕಂಪನಿಯ ನೈತಿಕ ಸಲಹೆಗಾರರಿಂದ ಅಥವಾ ಗುಂಪಿನ ಮುಖ್ಯ ನೈತಿಕ ಅಕಾರಿಯಿಂದ ಸೂಕ್ತವಾಗಿ ಬೆಂಬಲವನ್ನು ಪಡೆಯಬಹುದು.

ಎಲ್ಲಾ ಜಂಟಿ ಉದ್ಯಮಗಳನ್ನು ಟಾಟಾ ನೀತಿ ಸಂಹಿತೆ (TCOC)ಅಥವಾ ಟಿಸಿಓಸಿ ಯ ಎಲ್ಲಾ ಅಂಶಗಳನ್ನು ಒಳಗೊಂಡಿರುವ ನೀತಿ ಸಂಹಿತೆಯನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಲಾಗುತ್ತದೆ.

ಟಾಟಾ ನೀತಿ ಸಂಹಿತೆಯ ಈ ಆವೃತ್ತಿಯು ಎಲ್ಲಾ ಹಿಂದಿನ ಆವೃತ್ತಿಗಳು ಮತ್ತು ಸಂಬಂತ ದಾಖಲೆಗಳನ್ನು ಮೀರಿಸುತ್ತದೆ ಮತ್ತು ಜುಲೈ 29, 2015 ರಿಂದ ಜಾರಿಗೆ ಬರುತ್ತದೆ.

ಸಂಹಿತೆಗೆ ಸಂಬಂಸಿದ ಯಾವುದೇ ಪ್ರಶ್ನೆ ಅಥವಾ ಸ್ಪಷ್ಟೀಕರಣಕ್ಕಾಗಿ, ದಯವಿಟ್ಟು ಇಮೇಲ್ ಮೂಲಕ ಗುಂಪಿನ ಮುಖ್ಯ ನೈತಿಕ ಅಧಿಕಾರಿಯ ಕಚೇರಿಯನ್ನು ಸಂಪರ್ಕಿಸಿ: ethicsoffice@tata.com.

# ಟಾಟಾ ನೀತಿ ಸಂಹಿತೆ– 2015

ನಾನು ಟಾಟಾ ನೀತಿ ಸಂಹಿತೆಯನ್ನು ಸ್ವೀಕರಿಸಿದ್ದೇನೆಂದು ದೃಢಪಡಿಸುತ್ತಿದ್ದೇನೆ.

ನಾನು ಟಾಟಾ ನೀತಿ ಸಂಹಿತೆಯನ್ನು ಓದಿದ್ದೇನೆ ಮತ್ತು ಟಾಟಾ ಉದ್ಯೋಗಿಯಾಗಿ ನಾನು ಅದರಲ್ಲಿ ವಿವರಿಸಿರುವ ಮಾರ್ಗಸೂಚಿಗಳನ್ನು ಅನುಸರಿಸುವ ಅಗತ್ಯವಿದೆ ಮತ್ತು ಹಾಗೆ ಮಾಡಲು ವಿಫಲವಾದರೆ ನನ್ನ ಉದ್ಯೋಗ ನಿಯಮಗಳು ಮತ್ತು ಸಂಬಂತ ಕಂಪನಿ ನೀತಿಗಳ ಪ್ರಕಾರ ಕ್ರಮಕ್ಕೆ ಒಳಪಡಬಹುದು ಎಂದು ನಾನು ಒಪ್ಪಿಕೊಳ್ಳುತ್ತೇನೆ.

ಟಾಟಾ ನೀತಿ ಸಂಹಿತೆಯ ಉಲ್ಲಂಘನೆ ಅಥವಾ ಸಂಭಾವ್ಯ ಉಲ್ಲಂಘನೆಯ ಬಗ್ಗೆ ನನಗೆ ಕಳವಳವಿದ್ದರೆ, ಅಂತಹ ಕಳವಳಗಳನ್ನು ವರದಿ ಮಾಡಲು ನನ್ನ ಕಂಪನಿಯಲ್ಲಿ ಚಾನೆಲ್‌ಗಳು ಲಭ್ಯವಿವೆ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಅಗತ್ಯವಿದ್ದಾಗ ಈ ಚಾನೆಲ್ಗಳನ್ನು ಬಳಸಿಕೊಳ್ಳುವ ಮೂಲಕ, ನಾವು ಹೊಂದಿರುವ ಉನ್ನತ ನೈತಿಕ ಮಾನದಂಡಗಳನ್ನು ಕಾಪಾಡಿಕೊಳ್ಳಲು ನಾನು ನನ್ನ ಪಾತ್ರವನ್ನು ನಿರ್ವಹಿಸುತ್ತೇನೆ.

ಸಹಿ: ______________________________

ದಿನಾಂಕ: ______________________________

ಹೆಸರು: ______________________________

ವಿಭಾಗ: ______________________________

ವಿಳಾಸ: ______________________________

______________________________

______________________________

*(ದಯವಿಟ್ಟು ಘೋಷಣೆಯನ್ನು ನೈತಿಕ ಸಮಾಲೋಚಕರು ಅಥವಾ ನಿಮ್ಮ ಕಂಪನಿಯ ಮಾನವ ಸಂಪನ್ಮೂಲ ವಿಭಾಗಕ್ಕೆ ಸಲ್ಲಿಸಿ)*

TATA

# ಟಿಪ್ಪಣಿಗಳು

# ಟಿಪ್ಪಣಿಗಳು



TATA


ಸಂಹಿತೆಯ ಕುರಿತಾದ ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಸಂಪರ್ಕಿಸಿ:
ನೈತಿಕ ಕಚೇರಿ,
ಟಾಟಾ ಸನ್ಸ್ ಲಿ.,
ಬಾಂಬೆ ಹೌಸ್,
24, ಹೋಮಿಮೋದಿ ಸ್ಟ್ರೀಟ್,
ಮುಂಬೈ– 400001, ಭಾರತ
ಇಮೇಲ್: ethicsoffice@tata.com

**ಹಕ್ಕು ನಿರಾಕರಣೆ:** ಟಾಟಾ ನೀತಿಸಂಹಿತೆಯ ಇಂಗ್ಲೀಷ್ ಆವೃತ್ತಿ ಅಧಿಕೃತ ಲೇಖನ ಎನ್ನುವುದನ್ನು ದಯವಿಟ್ಟು ಗಮನಿಸಿ. ಪ್ರಾದೇಶಿಕ ಭಾಷೆಯ ಅನುವಾದದಲ್ಲಿ ಕಂಡುಬರುವ ಯಾವುದೇ ವ್ಯತ್ಯಾಸ ಕಾನೂನಿನ ಪರಿಣಾಮ ಬೀರುವುದಿಲ್ಲ. ಟಾಟಾ ನೀತಿಸಂಹಿತೆಯ ಅನುವಾದಿತ ಆವೃತ್ತಿಯಲ್ಲಿ ನೀಡಲಾದ ಮಾಹಿತಿಯ ಸ್ಪಷ್ಟತೆಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಗಳಿದ್ದಲ್ಲಿ, ದಯವಿಟ್ಟು ಅಧಿಕೃತ ಇಂಗ್ಲೀಷ್ ಭಾಷೆಯ ಟಾಟಾ ನೀತಿಸಂಹಿತೆ ಪ್ರತಿಯನ್ನು ಪರಿಶೀಲಿಸಿ.

**Disclaimer :** Please note that the English version of TATA Code of conduct is the official text. Any differences created in translation in regional language have no legal effect. If there areany concerns regarding the accuracy of the information presented within the translated versions of TATA Code of Conduct, please refer back to the official English-language TATA Code of Conduct copy.